# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ






ಸಂಪುಟ : 39 ಸಂಚಿಕೆ : 11 ಹೇಮಲಂಬಿ–ಪುಷ್ಯ ಕಲಿಯುಗಾಬ್ದ 5119 15–1–2018 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಸಂವಿಧಾನ, ಸೆಕ್ಯುಲರಿಸಂ ಮತ್ತು ಡಾ। ಬಿ. ಆರ್. ಅಂಬೇಡ್ಕರ್

ಕೆಲವು ದಿನಗಳ ಹಿಂದೆ ಲೋಕಸಭೆಯ ಅಧಿವೇಶನದಲ್ಲಿ ಸಂವಿಧಾನ, ಸೆಕ್ಯುಲರಿಸಂ ಮತ್ತು ಡಾ। ಬಿ.ಆರ್. ಅಂಬೇಡ್ಕರ್ ಅವರ ಹೆಸರಿನಲ್ಲಿ ಕೆಲವು ದಿನಗಳ ಕಾಲ ಗದ್ದಲವುಂಟಾಗಿತ್ತು. ಕೇಂದ್ರದ ಮಂತ್ರಿಯೊಬ್ಬರು ಸಮಾರಂಭವೊಂದರಲ್ಲಿ ಮಾಡಿದ ಭಾಷಣವೇ ಲೋಕಸಭೆಯಲ್ಲಿನ ಗದ್ದಲಕ್ಕೆ ವಿಷಯವಾಯಿತು. ಸೆಕ್ಯುಲರಿಸಂ ಎಂಬುದು ವ್ಯಕ್ತಿಯ ಒಂದು ಗುರುತು ಅಥವಾ ಕುಲವಾಗಲು ಸಾಧ್ಯವಿಲ್ಲ. ನಮ್ಮ ಧರ್ಮ, ಜಾತಿ ಅಥವಾ ರಿಲಿಜನ್‌ಗಳೇ ನಮ್ಮ ಅಸ್ಮಿತೆ (ಐಡೆಂಟಿಟಿ). ಹಾಗೆಯೇ ಸೆಕ್ಯುಲರಿಸಂ ಎನ್ನುವುದು ಸಂವಿಧಾನದಲ್ಲಿದೆ ಎಂದ ಮಾತ್ರಕ್ಕೆ ಅದನ್ನು ಬದಲಾಯಿಸಲು ಸಾಧ್ಯವಿಲ್ಲ ಎನ್ನುವುದು ಸರಿಯಲ್ಲ. ನಮ್ಮ ದೇಶಕ್ಕೆ ಸರಿಹೊಂದದ ಮತ್ತು ಇಲ್ಲಿ ಅಪಾರ್ಥಕ್ಕೊಳಗಾಗಿ ಅನರ್ಥಗಳನ್ನು ಸೃಷ್ಟಿಸುತ್ತಿರುವ ಸೆಕ್ಯುಲರಿಸಂ ನಮಗೆ ಬೇಕೇ ಎಂಬುದು ಪ್ರಶ್ನಾರ್ಹ. ಅಗತ್ಯ ಇದ್ದಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರಬಹುದು, ಇಂತಹ ಅನೇಕ ತಿದ್ದುಪಡಿಗಳು ಈಗಾಗಲೇ ನಮ್ಮ ಸಂವಿಧಾನದಲ್ಲಿ ಆಗಿವೆ. ಇವಿಷ್ಟು ಅವರ ಮಾತಿನ ತಾತ್ಪರ್ಯ. ಇದನ್ನೇ ದಾಳವಾಗಿಟ್ಟುಕೊಂಡು ಆ ಸಚಿವರು ರಾಜೀನಾಮೆ ಕೊಡಬೇಕು ಎಂಬುದು ವಿರೋಧ ಪಕ್ಷಗಳ ಆಗ್ರಹವಾಗಿತ್ತು.

### ಸೆಕ್ಯುಲರಿಸಂನ ಮೂಲ ಯಾವುದು?

ಇದರ ಸುತ್ತ ನಡೆದ ರಾಜಕೀಯವೆಲ್ಲವನ್ನು ಬದಿಗಿಟ್ಟು, ಜವಾಬ್ದಾರಿಯುತ ನಾಗರಿಕರಾಗಿ ಇದನ್ನು ನಾವು ಅವಲೋಕಿಸೋಣ. ಈ ಸೆಕ್ಯುಲರಿಸಂ ಎನ್ನುವುದು ಹೇಗೆ ಉಗಮವಾಯಿತು ಮತ್ತು ಅದು ನಮ್ಮ ದೇಶಕ್ಕೆ ಹೇಗೆ ಬಂತು ಎನ್ನುವುದರ ಇತಿಹಾಸವನ್ನು ನಾವು ಸ್ವಲ್ಪ ಗಮನಿಸಬೇಕು. ಯೂರೋಪಿನಲ್ಲಿ ಸರ್ಕಾರದ ಮೇಲೆ ಚರ್ಚಿನ ನಿಯಂತ್ರಣ ಹೆಚ್ಚಾದಾಗ ಅಲ್ಲಿನ ಚಿಂತಕರು ಅದನ್ನು ತಪ್ಪಿಸುವುದಕ್ಕೋಸ್ಕರ ಪ್ರಸ್ತುತಪಡಿಸಿದ ಚಿಂತನೆಯೇ ಸೆಕ್ಯುಲರಿಸಂ. ಸರ್ಕಾರದ ಮೇಲೆ ಯಾವುದೇ ರಿಲಿಜನ್ನಿನ (ಅಂದರೆ ಚರ್ಚಿನ) ನಿಯಂತ್ರಣ ಇರಬಾರದು, ಸರ್ಕಾರ ಮತ್ತು ರಿಲಿಜನ್‌ಗಳು ಪ್ರತ್ಯೇಕವಾಗಿರಬೇಕು, ಸರ್ಕಾರ ಯಾವುದೇ ರಿಲಿಜನ್ನನ್ನು ದೇಶದ ಅಧಿಕೃತ ರಿಲಿಜನ್ ಎಂದು ಘೋಷಿಸಬಾರದು ಎನ್ನುವುದು ಈ ಚಿಂತನೆಯ ಸಾರ. ಅಲ್ಲಿನ ಸಮಾಜಕ್ಕೆ ಅಂದು ತುರ್ತಾಗಿ ಬೇಕಾಗಿದ್ದ ಚಿಂತನೆ ಇದು. ಪ್ರತಿಯೊಂದರಲ್ಲೂ ಚರ್ಚು ಮೂಗು ತೂರಿಸುವುದನ್ನು ನೋಡಿ ಜನರಿಗೂ ಒಂದು ರೀತಿಯಲ್ಲಿ ಸಾಕಾಗಿಹೋಗಿದ್ದರಿಂದ, ಸೆಕ್ಯುಲರಿಸಂ ಯೂರೋಪಿನಲ್ಲಿ ಬಹಳ ಬೇಗ ಜನಪ್ರಿಯವಾಯಿತು. 19ನೇ ಶತಮಾನದಲ್ಲಿ ನಡೆದ ಕತೆ ಇದು. ಭಾರತದಲ್ಲಿ ಆಳ್ವಿಕೆ ನಡೆಸಿದ ಬ್ರಿಟಿಷರೂ ಕೂಡ ತಮ್ಮದು ಸೆಕ್ಯುಲರ್ ಸರ್ಕಾರವೆಂದು ಎಂದೂ ಹೇಳಿಕೊಂಡಿರಲಿಲ್ಲ. ಕ್ರಿಶ್ಚಿಯಾನಿಟಿಗೆ ರಾಜಾರೋಷವಾಗಿಯೇ ಅವರು ಪ್ರೋತ್ಸಾಹ ಕೊಡುತ್ತಿದ್ದುದು ನಮಗೆ ಗೊತ್ತೇ ಇದೆ.

### ಭಾರತಕ್ಕೆ ಸೆಕ್ಯುಲರಿಸಂ ಬಂದುದು ಹೇಗೆ?

1950ರಲ್ಲಿ ನಮ್ಮದೇ ಸಂವಿಧಾನ ಬಂತಷ್ಟೇ. ಆಗಲೂ ಭಾರತದ ಸಂವಿಧಾನದಲ್ಲಿ ಸೆಕ್ಯುಲರಿಸಮ್‌ನ ಉಲ್ಲೇಖವೇ ಇರಲಿಲ್ಲ. 1946ರಲ್ಲಿಯೇ ಸಂವಿಧಾನ ರಚನಾ ಸಮಿತಿಯಲ್ಲಿದ್ದ ಪ್ರೊ. ಕೆ.ಟಿ. ಷಾ ಅವರು ನಮ್ಮ ದೇಶವನ್ನು 'ಸೋಷಿಯಲಿಸ್ಟ್, ಸೆಕ್ಯುಲರ್, ಫೆಡರಲ್' ಗಣರಾಜ್ಯವೆಂದು ನಮ್ಮ ಸಂವಿಧಾನದಲ್ಲಿ ಘೋಷಿಸಬೇಕೆಂದು ವಾದ ಮಂಡಿಸಿದ್ದರು. ಆದರೆ, ಅದನ್ನು ಡಾ। ಬಿ.ಆರ್. ಅಂಬೇಡ್ಕರ್ ತಿರಸ್ಕರಿಸಿದರು. ನಮ್ಮ ಸಂವಿಧಾನದ ಕರಡಿನಲ್ಲಿ ಜಾತ್ಯತೀತ ಮತ್ತು ಸರ್ವಮತಧರ್ಮ ಸಮಭಾವದ ಕಲ್ಪನೆಗಳು ಈಗಾಗಲೇ ಇವೆ. ಹಾಗೆಯೇ, ಪ್ರತಿ ಪ್ರಜೆಗೂ ಮತೀಯ ಸ್ವಾತಂತ್ರ್ಯವನ್ನು ಕೊಡಲಾಗಿದೆ. ಸರ್ಕಾರ ಯಾವುದೇ ಮತಪ್ರಸಾರ ಮಾಡುವ ಸಂಸ್ಥೆಗಳಿಗೆ ಅನುದಾನ ನೀಡಬಾರದು ಎಂಬ ಅಂಶಗಳೂ ಇವೆ. ಮತ್ತು, ಸೆಕ್ಯುಲರಿಸಂ ಎಂಬುದು ಯೂರೋಪಿನಲ್ಲಿ ಚರ್ಚು ಮತ್ತು ಸರ್ಕಾರದ ನಡುವಿನ ಸಂಬಂಧವನ್ನು ನಿಗದಿಪಡಿಸುವ ಸಿದ್ಧಾಂತ; ನಮ್ಮಲ್ಲಿ ಸರ್ಕಾರದ ಆಡಳಿತದಲ್ಲಿ ಚರ್ಚು (ಮತಧರ್ಮ) ಮಧ್ಯಪ್ರವೇಶ ಮಾಡುವ ಸಮಸ್ಯೆ ಇಲ್ಲವಾದ್ದರಿಂದ ನಮಗೆ ಸೆಕ್ಯುಲರಿಸಂ ಸಿದ್ಧಾಂತ ಅಗತ್ಯವಿಲ್ಲವೆಂಬುದು ಡಾ। ಬಿ.ಆರ್. ಅಂಬೇಡ್ಕರ್ ಮತ್ತು ಸಂವಿಧಾನ ರಚನಾ ಸಮಿತಿಯ ಹೆಚ್ಚಿನವರ ಅಭಿಪ್ರಾಯವಾಗಿತ್ತು. ಹಾಗೆಯೇ ಸೋಷಿಯಲಿಸಂ ಎಂಬುದು ಸಮಾಜದ ರಚನೆ ಹೇಗಿರಬೇಕು ಎಂಬ ವಿಷಯವಾದ್ದರಿಂದ ಅದು ಸಂವಿಧಾನದ ವ್ಯಾಪ್ತಿಗೆ ಬರುವುದಿಲ್ಲ; ಸಾಮಾಜಿಕ ರಚನೆ ಹೇಗಿರಬೇಕು ಎನ್ನುವುದನ್ನು ಕಾಲಕಾಲಕ್ಕೆ ಬರುವ ಸಾಮಾಜಿಕ ಚಿಂತಕರು ನಿರ್ಧರಿಸಿ ಮಾರ್ಗದರ್ಶನ ಮಾಡಬೇಕೇ ಹೊರತು, ಸಂವಿಧಾನದಲ್ಲಿ ಹೇಳಬೇಕಾದ ವಿಷಯವಲ್ಲ; ಸಂವಿಧಾನವೆನ್ನುವುದು ಕೇವಲ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಕಾರ್ಯಕಲಾಪಗಳನ್ನು ನಿಯಂತ್ರಿಸುವ ಮಾರ್ಗಸೂಚಿಯೇ ಹೊರತು ಸಮಾಜವನ್ನು ನಿಯಂತ್ರಿಸುವ ಮಾರ್ಗಸೂಚಿಯಲ್ಲ ಎಂದು ಅಂಬೇಡ್ಕರ್ ಅವರು ಸ್ಪಷ್ಟವಾಗಿ ಹೇಳಿದ್ದರು. ಹೀಗಾಗಿ, 'ಸೋಷಿಯಲಿಸ್ಟ್, ಸೆಕ್ಯುಲರ್ ಮತ್ತು ಫೆಡರಲ್' ಎಂಬ ಶಬ್ದಗಳನ್ನು ನಮ್ಮ ಸಂವಿಧಾನದಲ್ಲಿ ಸೇರಿಸಲಿಲ್ಲ.

ಹಾಗಾದರೆ, ನಮ್ಮ ಸಂವಿಧಾನದಲ್ಲಿ ಸೋಷಿಯಲಿಸ್ಟ್ ಮತ್ತು ಸೆಕ್ಯುಲರ್ ಶಬ್ದಗಳು ಯಾವಾಗ ಬಂದಿದ್ದು ಎನ್ನುವುದು ಒಂದು ಪ್ರಶ್ನೆ. 1975ರಲ್ಲಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯನ್ನು ಹೇರಿದ್ದರಷ್ಟೇ. ಆಗ, ಸಂವಿಧಾನಕ್ಕೆ 42ನೇ ತಿದ್ದುಪಡಿಯನ್ನು ತರಲಾಯಿತು. ಇಡೀ ಸಂವಿಧಾನದ ಮೂಲಸ್ವರೂಪವನ್ನೇ ಬದಲಾಯಿಸಿ ಸರ್ಕಾರಕ್ಕೆ ಸರ್ವಾಧಿಕಾರ ಕೊಡುವಂತಹ, ಜನರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವಂತಹ ಅನೇಕ ಬದಲಾವಣೆಗಳನ್ನು 42ನೇ ತಿದ್ದುಪಡಿಯಲ್ಲಿ ಮಾಡಲಾಯಿತು. ಅದರಲ್ಲಿ ಭಾರತ ಒಂದು 'ಸೋವರಿನ್ ಸೋಷಿಯಲಿಸ್ಟ್ ಸೆಕ್ಯುಲರ್ ಡೆಮಾಕ್ರಟಿಕ್ ರಿಪಬ್ಲಿಕ್' ಎಂಬ ತಿದ್ದುಪಡಿಯನ್ನು ಸೇರಿಸಲಾಯಿತು. ಭಾರತದ ಸಂದರ್ಭದಲ್ಲಿ ಸೆಕ್ಯುಲರ್ ಎನ್ನುವುದಕ್ಕೆ ಏನು ಅರ್ಥ ಎಂಬ ವಿವರಣೆಗಳು ನಮ್ಮ ಸಂವಿಧಾನದಲ್ಲಿ ಎಲ್ಲಿಯೂ ಇಲ್ಲ!

ಯೂರೋಪಿನ ಸೆಕ್ಯುಲರಿಸಂ ಯಾವ ಸಮಸ್ಯೆಯನ್ನು ಪರಿಹರಿಸಿತೋ ಆ ಸಮಸ್ಯೆ ಇಲ್ಲಿ ಇರಲೇ ಇಲ್ಲ. ಹಾಗಾದರೆ, ಸೆಕ್ಯುಲರಿಸಂ ಅನ್ನು ಏಕೆ ಇಲ್ಲಿ ತುರುಕಲಾಯಿತು ಎನ್ನುವುದಕ್ಕೆ ಯಾರ ಬಳಿಯೂ ಉತ್ತರವಿಲ್ಲ. ಅದಕ್ಕೆ 'ಜಾತ್ಯತೀತ' ಎನ್ನುವುದೇ ಅರ್ಥವಾದರೆ, ನಮ್ಮ ಸಂವಿಧಾನದಲ್ಲಿ ಅದು ಮೊದಲೇ ಇತ್ತು. ಹಾಗಾಗಿ, ಸೆಕ್ಯುಲರಿಸಂ ಎಂಬ ಹೊಸ ಸಿದ್ಧಾಂತದ ಅಗತ್ಯವಿರಲಿಲ್ಲ. ಹೀಗೆ ಈ ಶಬ್ದವನ್ನು ಸೇರಿಸಿ ನಮ್ಮ ರಾಜಕೀಯದಲ್ಲಿ ಇನ್ನಷ್ಟು ಗೊಂದಲ ಸೃಷ್ಟಿ ಮಾಡಿದ್ದು ಇಂದಿರಾ ಗಾಂಧಿಯವರ ನೇತೃತ್ವದ ಕಾಂಗ್ರೆಸ್ ಸರ್ಕಾರ. ಅಲ್ಲಿಂದ ಮುಂದೆ, ರಾಜಕೀಯ ಪಕ್ಷಗಳು ತಮಗೆ ಬೇಕಾದ ಹಾಗೆ ಇದನ್ನು ಅರ್ಥೈಸಿ, ಅದನ್ನು ತಮ್ಮ ದಾಳವಾಗಿ ಉಪಯೋಗಿಸಿಕೊಂಡು ಬಂದಿದ್ದನ್ನು ನಾವು ನೋಡಿದ್ದೇವೆ.

ಹೀಗೆ ವಿವಿಧ ಜನರ ಮನದಲ್ಲಿ ವಿವಿಧ ಅರ್ಥಗಳನ್ನು ಪಡೆಯುತ್ತಾ ಇಂದು 'ಸೆಕ್ಯುಲರಿಸಂ' ಎಂದರೆ ಅಲ್ಪಸಂಖ್ಯಾತರ ತುಷ್ಟೀಕರಣ ಎಂಬಲ್ಲಿಗೆ ಬಂದು ನಿಂತಿದೆ. ಸೆಕ್ಯುಲರ್ ಎಂದು ಹೇಳಿಕೊಳ್ಳುವ ಎಲ್ಲ ರಾಜಕೀಯ ಪಕ್ಷಗಳೂ, ಬುದ್ಧಿಜೀವಿಗಳೂ ಅದರ ಹೆಸರಿನಲ್ಲಿ ಮಾಡುತ್ತಿರುವುದು ಮಾತ್ರ ಅಲ್ಪಸಂಖ್ಯಾತರ ತುಷ್ಟೀಕರಣ ಮತ್ತು ಹಿಂದುಗಳ ದಮನ. ಹೋಗಲಿ, ಅದಕ್ಕೆ ಜಾತ್ಯತೀತ ಎಂಬ ಅರ್ಥ ಕೊಟ್ಟರೂ ಅದು ಆಚರಣೆಯಲ್ಲಿ ಎಲ್ಲೂ ಕಾಣಿಸುತ್ತಿಲ್ಲ. ಸೆಕ್ಯುಲರ್ ಎಂದು ಹೇಳಿಕೊಳ್ಳುವ ಹೆಚ್ಚಿನವರು ಜಾತಿ ರಾಜಕೀಯದಲ್ಲಿ ತೊಡಗಿರುವುದನ್ನೂ, ಒಂದು ಜಾತಿಯನ್ನು ಇನ್ನೊಂದು ಜಾತಿಯ ವಿರುದ್ಧ ಎತ್ತಿ ಕಟ್ಟುತ್ತಿರುವುದನ್ನೂ ನಾವು ನೋಡುತ್ತಿದ್ದೇವೆ. ಸೆಕ್ಯುಲರಿಸಂ ಅನ್ನು ಹೀಗೆಯೇ ಅರ್ಥೈಸಿ ಆಚರಿಸುವುದಾದರೆ, ಅದು ಬೇಕೆಂದು ಯಾರು ತಾನೇ ಹೇಳಿಯಾರು? ಹಾಗಾಗಿ, ಅದು ಹೋಗುವುದೇ ಸರಿ ಎನ್ನುವ ಅಭಿಪ್ರಾಯ ಹೆಚ್ಚಿನ ಜನರದ್ದಾಗಿದೆ ಎನ್ನುವುದು ನಮ್ಮೆಲ್ಲರಿಗೂ ಗಮನಕ್ಕೆ ಬಂದಿರುವ ವಿಷಯವೇ.

### ಹಿಂದು ಚಿಂತನೆಯಲ್ಲಿ ಜಾತ್ಯತೀತತೆ

ಭಾರತ ಹಿಂದುರಾಷ್ಟ್ರ. ಬ್ರಿಟಿಷರು ಇಲ್ಲಿಗೆ ಬರುವ ಮೊದಲಿನಿಂದಲೂ ಇಲ್ಲಿನ ಆಡಳಿತದಲ್ಲಿ ಜಾತಿ ಆಧಾರಿತ ಭೇದ ಅಥವಾ ರಿಲಿಜನ್ ಆಧಾರಿತ ಭೇದ ಇರಲೇ ಇಲ್ಲ. ಹಿಂದು ರಾಜರು ಯಾವತ್ತೂ ಜಜಿಯಾದಂತಹ ತಲೆಗಂದಾಯ ಹೇರಿದ ಉದಾಹರಣೆಗಳಿಲ್ಲ. ಜಾತಿ ಜಾತಿಗಳ ನಡುವೆ ಭೇದ ಮತ್ತು ಅಸ್ಪೃಶ್ಯತೆಗಳಂತಹ ಆಚರಣೆಗಳಿದ್ದವಾದರೂ, ಜಾತಿಯ ಆಧಾರದ ಮೇಲೆ ಸರ್ಕಾರದ ಕಾನೂನು ಒಬ್ಬೊಬ್ಬರಿಗೆ ಒಂದೊಂದು ತರಹ ಇದ್ದ ಉದಾಹರಣೆಗಳಿಲ್ಲ. ರಿಲಿಜನ್, ಸಂಪ್ರದಾಯ, ನಂಬಿಕೆ, ಪೂಜಾಪದ್ಧತಿಗಳೆಲ್ಲ ಪ್ರತಿ ವ್ಯಕ್ತಿಯ ಸ್ವಾತಂತ್ರ್ಯ ಎನ್ನುವುದು ಹಾಗೂ ಅಂತಹ ವಿವಿಧ ಸಂಪ್ರದಾಯ, ಪೂಜಾಪದ್ಧತಿಗಳನ್ನು ಗೌರವಿಸುವುದು ಹಿಂದು ವಿಚಾರ. ಹೀಗಾಗಿ, ಸರ್ವಮತಸಮಭಾವವೆನ್ನುವುದು ಹಿಂದುವಿಗೆ ತನ್ನ ರಕ್ತದಲ್ಲೇ ಬಂದಿರುವ ಸ್ವಭಾವ. ಈ ದೃಷ್ಟಿಯಲ್ಲಿ ಹಿಂದುಗಳು ಸಹಜವಾಗಿಯೇ ಜಾತ್ಯತೀತರು.

ಇಂದು ರಾಜಕೀಯ ಪಕ್ಷಗಳು ಜಾತಿಪ್ರಜ್ಞೆಯನ್ನು ಜಾಗೃತಗೊಳಿಸಿ ಅದರ ಆಧಾರದಲ್ಲಿ ರಾಜಕೀಯ ಮಾಡುತ್ತಿರುವುದು ತಮ್ಮ ಸ್ವಾರ್ಥಕ್ಕಾಗಿಯೇ ಹೊರತು, ಅದು ಹಿಂದುವಿನ ಸಹಜ ಸ್ವಭಾವವಲ್ಲ. ಇಲ್ಲಿ ಆಡಳಿತ, ಶಿಕ್ಷಣ, ವ್ಯಾಪಾರ, ಕೃಷಿ, ಕೈಗಾರಿಕೆ ಇವೆಲ್ಲ ಬೇರೆ ಬೇರೆ ಜಾತಿಯವರ ವೃತ್ತಿಗಳಾಗಿದ್ದವೇ ಹೊರತು ಎಲ್ಲವನ್ನೂ ಒಂದೇ ವರ್ಣ ಅಥವಾ ಜಾತಿಯವರು ಮಾಡುತ್ತಿದ್ದ ಉದಾಹರಣೆಗಳು ಇಲ್ಲವೇ ಇಲ್ಲ. ಎಲ್ಲ ಜಾತಿಗಳಲ್ಲಿ ಸಾಮರಸ್ಯವಿತ್ತು, ಸಹಕಾರವಿತ್ತು. ಜಾತಿದ್ವೇಷವಿರಲಿಲ್ಲ. ಅಷ್ಟಕ್ಕೂ, ಎಲ್ಲರೂ, ಎಲ್ಲವೂ ದೇವರೇ; ಎಂಬ ಅದ್ವೈತ ಸಿದ್ಧಾಂತವನ್ನು ಹೇಳಿದ ಹಿಂದು ಧರ್ಮದಲ್ಲಿ ಮನುಷ್ಯ ಮನುಷ್ಯರ ನಡುವೆ ಭೇದಕ್ಕೆ ಅವಕಾಶವಾದರೂ ಎಲ್ಲಿದೆ?

ಒಟ್ಟಿನಲ್ಲಿ, ಡಾ। ಬಿ. ಆರ್. ಅಂಬೇಡ್ಕರ್ ಬೇಡವೆಂದು ಹೇಳಿದ್ದ ಸೆಕ್ಯುಲರಿಸಂ ಅನ್ನು ನಮ್ಮ ಸಂವಿಧಾನದಲ್ಲಿ ಸೇರಿಸಿದರೆ ಅವರಿಗೆ ಅಪಮಾನ ಮಾಡಿದ ಹಾಗೋ ಅಥವಾ ಅದನ್ನು ತೆಗೆದು ಆದ ತಪ್ಪನ್ನು ಸರಿಪಡಿಸಿದರೆ ಅವರಿಗೆ ಅಪಮಾನ ಮಾಡಿದ ಹಾಗೋ ಎನ್ನುವುದು ಯೋಚಿಸಬೇಕಾದ ವಿಷಯ. ಹಾಗೆಯೇ, ಸೆಕ್ಯುಲರಿಸಂನಿಂದ ನಮಗೆ ಲಾಭವಾಗಿದೆಯೇ ಅಥವಾ ನಷ್ಟವಾಗಿದೆಯೇ ಎನ್ನುವುದೂ ಕೂಡ ಚರ್ಚೆಯಾಗಬೇಕಾದ ವಿಷಯ. ಸೆಕ್ಯುಲರಿಸಂ ಎಂದರೆ ಕೇವಲ ಜಾತ್ಯತೀತತೆಯಾಗಿ ಇಂದು ಉಳಿಯದೇ, ಅದು ಅಲ್ಪಸಂಖ್ಯಾತ ತುಷ್ಟೀಕರಣವಾಗಿದೆ ಎನ್ನುವುದೂ ಈ ಚರ್ಚೆ ನಡೆಯುವಾಗ ನಮ್ಮ ಗಮನದಲ್ಲಿರಬೇಕಾದ್ದು ಅಗತ್ಯ.

## ಎಲ್ಲೋ ಕೇಳಿದ ಕಥೆ

ಅದೊಮ್ಮೆ ಕೃಷ್ಣಭಕ್ತ ಸಂತ ಜೀವ ಗೋಸ್ವಾಮಿಯವರು ಬೃಂದಾವನಕ್ಕೆ ಆಗಮಿಸಿದರು. ಈ ಸುದ್ದಿ ಮೀರಾಬಾಯಿಗೆ ತಿಳಿದದ್ದೇ ಆಕೆ ಸಂತರ ದರ್ಶನಾಭಿಲಾಷೆಯಿಂದ ಬಂದಳು. ಆದರೆ ಜೀವ ಗೋಸ್ವಾಮಿಯವರು ಯಾವ ನಾರಿಯನ್ನೂ ಭೇಟಿಯಾಗುತ್ತಿರಲಿಲ್ಲ. ಹೀಗಾಗಿ ತಮ್ಮಿಬ್ಬರ ಮಧ್ಯೆ ಪರದೆಯೊಂದರ ವ್ಯವಸ್ಥೆ ಮಾಡಿಸಿ "ನಾನು ಬಾಲ ಬ್ರಹ್ಮಚಾರಿ, ನೀವೋ ಪ್ರಕೃತಿ(ಸ್ತ್ರೀ)ಯಾಗಿರುವುದರಿಂದ ನೇರವಾಗಿ ನಿಮ್ಮ ದರ್ಶನ ಮಾಡಲಾಗುವುದಿಲ್ಲ" ಎಂದರು.

ಇದನ್ನು ಕಂಡು ಚಕಿತಳಾದ ಮೀರಾಬಾಯಿ, "ಗೋಸ್ವಾಮಿಯವರೇ, ನೀವು ಪ್ರಕೃತಿ ಮತ್ತು ಪುರುಷರ ಬಂಧನದಲ್ಲಿ ಇಂದಿಗೂ ಸಿಲುಕಿಕೊಂಡಿರುವುದು ಆಶ್ಚರ್ಯವಾಗಿದೆ. ನಿಮ್ಮಂತಹ ಸಂತರು ಸಮದರ್ಶಿಯಾಗಿರಬೇಕು. ನಿಮಗೆ ಶ್ರೀಮದ್ ಭಾಗವತದ ಸಮ್ಯಕ್ ಜ್ಞಾನದ ಅರಿವಾದಂತಿಲ್ಲ. ಅದರಲ್ಲಿ ನೀವು 'ವಾಸುದೇವಃ ಪುಮಾನೇಕಃ ಸ್ತ್ರಿಮಯೀಮಿತರಜ್ಜಗತ್'(ಪ್ರಭು ಶ್ರೀಕೃಷ್ಣ ನೊಬ್ಬನೇ ಪುರುಷ, ಸಂಸಾರದಲ್ಲಿ ಮಿಕ್ಕೆಲ್ಲರೂ ಸ್ತ್ರಿಯರೇ ಆಗಿದ್ದಾರೆ) ಎಂಬುದನ್ನು ಓದಲಿಲ್ಲವೇ? ಓದಿರುವುದೇ ಆದಲ್ಲಿ, ಸ್ವತಃ ನಿಮ್ಮನ್ನೇ ಯಾವ ರೀತಿಯಾಗಿ ಪುರುಷನೆಂದು ಬಗೆಯುತ್ತೀರಿ? ಬೃಂದಾವನದಲ್ಲಿ ಶ್ರೀಕೃಷ್ಣನ ಹೊರತಾಗಿಯೂ ಮತ್ತೊಬ್ಬ ಪುರುಷನಿರುವ ಸಂಗತಿ ನನಗೆ ತಿಳಿದದ್ದೇ ಇಂದು" ಎಂದು ಉತ್ತರಿಸಿದಳು.

ಇದನ್ನು ಕೇಳಿದ್ದೇ ಗೋಸ್ವಾಮಿಯವರ ಬುದ್ಧಿಯನ್ನು ಮರೆಸಿದ್ದ ಭ್ರಮೆಯ ಪರದೆ ಕಳಚಿತು. ಅವರು ಪರದೆ ಸರಿಸಿದರು ಮತ್ತು ಮೀರಾಬಾಯಿಯಲ್ಲಿ ಕ್ಷಮೆಕೋರಿ ಭಗವದ್ ಚರ್ಚೆ ನಡೆಸಿದರು.



ಕುಮಟಾದಲ್ಲಿ ಖಾಸಗೀ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳುವ ಸಲುವಾಗಿ ಹವಾನಿಯಂತ್ರಣರಹಿತ ಪ್ಯಾಸೆಂಜರ್ ರೈಲಿನ ದ್ವಿತೀಯ ದರ್ಜೆ ಕೋಚ್‌ನಲ್ಲಿ ಆಗಮಿಸಿದ ಮಾಜಿ ರಕ್ಷಣಾ ಸಚಿವ ಹಾಗೂ ಗೋವಾ ಮುಖ್ಯಮಂತ್ರಿ ಮನೋಹರ್ ಪಾರಿಕ್ಕರ್. ವಿವಿಐಪಿ ಸ್ಥಾನಮಾನವನ್ನು ಬದಿಗಿಟ್ಟು ಪ್ರಯಾಣಿಕರೊಂದಿಗೆ ಬೆರೆತು ಸೆಲ್ಫಿಗೂ ಪೋಸ್ ನೀಡಿದರು.



**ಹೆಸರು:** ಲಾಲ್ ಕಂಧಾರಿ


**ಮೂಲ:** ಹೈದರಾಬಾದ್ ಕರ್ನಾಟಕ

**ವಿಶೇಷತೆ:** ಕೃಷಿ ಮತ್ತು ಸಾಗಾಣಿಕೆಗೆ ಉಭಯೋಪಯೋಗಿ. ಕಂಧಾರಿ ಮಧ್ಯಮ ಗಾತ್ರದ ಅತ್ಯಂತ ಚುರುಕಿನ ಸದೃಢ ತಳಿ.

ಸಾಮಾನ್ಯವಾಗಿ ಈ ತಳಿಯ ಬಣ್ಣ ಕೆಂಪಾದರೂ, ಹೋರಿಗಳದ್ದು ಹೆಚ್ಚು ಗಾಢವಾದ ಕೆಂಪು. ಉದ್ದ ಕೆಳಬಗ್ಗಿದ ಕಿವಿಗಳು, ಉಬ್ಬಿದ, ಅಗಲ ಹಣೆ, ಕಪ್ಪು ವೃತ್ತದ ಮಧ್ಯದ ಹೊಳೆಯುವ ಕಡುಗಪ್ಪಿನ ಕಣ್ಣುಗಳು, ಅಷ್ಟೇನೂ ಉದ್ದವಾಗಿಲ್ಲದ ಆದರೆ ದಪ್ಪನೆಯ ಕೊಂಬುಗಳು, ದೊಡ್ಡ ಡುಬ್ಬ (ಹೋರಿಗಳಲ್ಲಿ ಗಣನೀಯವಾಗಿ ಎತ್ತರವಾಗಿರುತ್ತದೆ).

## ಪುಸ್ತಕದಿಂದ...

ವರಕವಿ ದ.ರಾ. ಬೇಂದ್ರೆಯವರ ಜತೆ ಯಾದವರಾಯರ ಮೊದಲ ಭೇಟಿ ಬಹು ಮಾರ್ಮಿಕವಾಗಿತ್ತು. ಧಾರವಾಡಕ್ಕೆ ಬಂದ ಹೊಸತರಲ್ಲಿ ಗದಗಿನ ಮಾಮು ಖರೆಯವರ ಸಂಗಡ ಅವರು ಬೇಂದ್ರೆಯವರಲ್ಲಿಗೆ ಹೋದರು. ತಮ್ಮ ಮನೆಗೆ ಬಂದಂತಹ 'ನಾಗಪುರದ ತರುಣ'ನಿಂದ ಸಂಘದ ವಿಚಾರ, ಕೆಲಸದ ರೀತಿ ಇತ್ಯಾದಿ ವಿವರವಾಗಿ ತಿಳಿದ ಕವಿವರ್ಯರು ಆನಂದಿತರಾದರು. ಕೊನೆಯಲ್ಲಿ ತಮ್ಮದೇ ಶೈಲಿಯಲ್ಲಿ ಅವರು ಮಾರ್ಮಿಕವಾಗಿ ಪ್ರಶ್ನಿಸಿದರು. "ಸಂಘದ ವಿಚಾರವೇನೋ ಒಳ್ಳೆಯದೇ, ಆದರೆ ಈ ವಿಚಾರವನ್ನು ನೀವು ಕರ್ನಾಟಕದ ಜನರಿಗೆ ಹೇಗೆ ತಲುಪಿಸುವಿರಿ?"




ಅದಕ್ಕೆ ಯಾದವರಾಯರು "ನಾನಂತೂ ಇಲ್ಲಿನ ಜನರ ಸೇವೆಗೆ ಬಂದವನು. ಸೇವೆಯ ಜತೆಯಲ್ಲಿ ನನಗೆ ತಿಳಿದಷ್ಟು ಹೇಳುವೆ" ಎಂದು ವಿನಮ್ರವಾಗಿ ಉತ್ತರಿಸಿದರು. ಈ ಮಾತು ಕೇಳಿ ಬೇಂದ್ರೆಯವರು ಇನ್ನೂ ಮಾರುಹೋದರು. "ಛಲೋದಾಗಿ ಹೇಳಿದಿರಿ, ಉಪದೇಶಕನ ಮನೋಭೂಮಿಕೆಯಿಂದ ಕನ್ನಡದ ಜನರನ್ನು ಗೆಲ್ಲಲಾರಿರಿ. ಆದರೆ, ಅವರ ಸೇವೆಗಾಗಿ ಮುಂದಾದರೆ ಆಗ ನಿಮ್ಮ ಅನುಯಾಯಿಗಳಾಗಿ ಅವರು ಬರುವುದು ಖಂಡಿತ. ಅವರನ್ನು ಮರಳುಗೊಳಿಸಲು ಪ್ರಯತ್ನಿಸಬೇಡಿ. ಆದರೆ ಅವರ ಹೃದಯಗಳನ್ನು ಗೆಲ್ಲಲು ಯತ್ನಿಸಿ (Don't try to cap them but try to capture their hearts)". ಅವರು ಹೇಳಿದ ಈ ಕವಿಮಾತು ಯಾದವರಾಯರಿಗೊಂದು ದಾರಿದೀಪವೇ ಆಯಿತು. ವಾಸ್ತವಿಕವಾಗಿ ಈ ಮೊದಲ ಭೇಟಿಯಲ್ಲೇ ಯಾದವರಾಯರು ಬೇಂದ್ರೆಯವರ ಹೃದಯವನ್ನೇ ಗೆದ್ದರು. ಅಂದಿನ ಪ್ರಸಂಗ ಅವರಿಬ್ಬರ ನಡುವಣ ಗಾಢವಾದ ಸ್ನೇಹಕ್ಕೆ ನಾಂದಿಯಾಯಿತು.

ಸಂಘದಲ್ಲಿ ತರುಣ ಸ್ವಯಂಸೇವಕರು ಪ್ರತಿಜ್ಞೆ ಸ್ವೀಕರಿಸಿ ಸಮಾಜಕಾರ್ಯಕ್ಕಾಗಿ ದೀಕ್ಷಾಬದ್ಧರಾಗುವುದು ಆರಂಭದಿಂದಲೂ ನಡೆದುಕೊಂಡು ಬಂದಿದೆ. ಪ್ರತಿಜ್ಞೆಯನ್ನು ತಮ್ಮ ಮಾತೃಭಾಷೆಯಲ್ಲೇ ಸ್ವೀಕರಿಸಬೇಕಾದುದೂ ಸಹಜವೇ. ನಾಗಪುರದಿಂದ ಬರುವಾಗ ಯಾದವರಾಯರು ತಂದಿದ್ದುದು ಪ್ರತಿಜ್ಞೆಯ ಮರಾಠಿ ಆವೃತ್ತಿ. ಯಾದವರಾಯರ ವಿನಂತಿಯನ್ನು ಮನ್ನಿಸಿ ಅದನ್ನು ಕನ್ನಡಕ್ಕೆ ಅನುವಾದಿಸಿ ಕೊಟ್ಟವರು ಬೇಂದ್ರೆಯವರು. ಸಾಧಕನ ಮನಸ್ಸನ್ನು ತುಂಬಾ ದೃಢಗೊಳಿಸುವಂತಹ ಸಂಸ್ಕಾರಸಾಮರ್ಥ್ಯ ಉಳ್ಳದ್ದು ಈ ಪ್ರತಿಜ್ಞೆ ಎಂಬ ಅಭಿಮತವನ್ನು ಸಹ ಈ ಸಂದರ್ಭದಲ್ಲಿ ಅವರು ಒತ್ತಿ ಹೇಳಿದ್ದರು.

ಪುಸ್ತಕದ ಹೆಸರು: **"ಜನಮನ ಶಿಲ್ಪಿ"**
(ದೂರದ ಮಹಾರಾಷ್ಟ್ರದಿಂದ ಬಂದು ಕರ್ನಾಟಕದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯವನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಶ್ರೀ ಯಾದವರಾವ್ ಜೋಶಿಯವರ ಜೀವನಕಥೆ.)

ಲೇಖಕರು : **ಚಂದ್ರಶೇಖರ ಭಂಡಾರಿ**
ಪ್ರಕಾಶಕರು: **ಸಾಹಿತ್ಯ ಸಂಗಮ, ಬೆಂಗಳೂರು**



ಕರ್ನಾಟಕದಿಂದ ಆಯ್ಕೆಯಾದ ರಾಜ್ಯಸಭೆ ಸದಸ್ಯರೂ ಆಗಿರುವ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸದರ ನಿಧಿ ಯೋಜನೆಯಡಿ ತಮ್ಮ ಕ್ಷೇತ್ರದಲ್ಲಿ ನಡೆಸಬೇಕಾದ ಯೋಜನೆಗಳ ಕುರಿತು ಮಾತನಾಡಲು ಬೆಂಗಳೂರಿಗೆ ಇತ್ತೀಚೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಯಾವುದೇ ಭದ್ರತೆ ಇಲ್ಲದೇ ಸಾಮಾನ್ಯ ಜನರಂತೆ ಬೀದಿಯಲ್ಲಿ ನಡೆದು ತಮ್ಮ ಕಛೇರಿಯ ಸಮೀಪವಿರುವ ಸಾಮಾನ್ಯ ಹೋಟೆಲಿನಲ್ಲಿ ಊಟ ಮಾಡಿದರು.

## ಸೂರ್ಯಸೇನ್
### (22 ಮಾರ್ಚ್ 1894 – 12 ಜನವರಿ 1934)



ಸೂರ್ಯಸೇನ್ ಭಾರತದ ಸ್ವಾತಂತ್ರ್ಯ ಹೋರಾಟದ ಮಹಾನ್ ಕ್ರಾಂತಿಕಾರಿಗಳಲ್ಲೊಬ್ಬರು. ಅವರು ಭಾರತೀಯ ರಿಪಬ್ಲಿಕನ್ ಸೇನೆಯನ್ನು ಸ್ಥಾಪಿಸಿದರು ಮತ್ತು ಚಿತ್ತಗಾಂಗ್ ಕ್ರಾಂತಿಯನ್ನು ಯಶಸ್ವಿಯಾಗಿ ಮುನ್ನಡೆಸಿದವರು. ರಾಷ್ಟ್ರೀಯ ಪ್ರೌಢಶಾಲೆಯಲ್ಲಿ ಹಿರಿಯ ಪದವೀಧರ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಅವರನ್ನು ಜನರು ಪ್ರೀತಿಯಿಂದ 'ಮಾಸ್ಟರ್‌ದಾ' ಎಂದೇ ಗುರುತಿಸುತ್ತಿದ್ದರು. ಸೂರ್ಯಸೇನ್ ತಂದೆಯ ಹೆಸರು ರಾಮರಾಜನ್. ಚಿತ್ತಗಾಂಗ್‌ನ ನೋಪಾರಾ ಪ್ರದೇಶದ ನಿವಾಸಿಯಾಗಿದ್ದವರು. ಶಿಕ್ಷಕರೊಬ್ಬರ ರಾಷ್ಟ್ರವಾದಿ ವಿಚಾರಗಳಿಂದ ಬಹಳ ಪ್ರಭಾವಿತರಾದ ಸೂರ್ಯಸೇನ್ ಬಿಎ ಶಿಕ್ಷಣಕ್ಕಾಗಿ ಬಹರಾಮ್‌ಪುರ ಕಾಲೇಜಿಗೆ ಸೇರಿದರು. ಅಲ್ಲಿ ಜುಗಂತಾರ್ ಹೆಸರಿನ ಪ್ರಸಿದ್ಧ ಕ್ರಾಂತಿಕಾರಿ ಗುಂಪಿಗೆ ಪರಿಚಿತರಾದರು. ಭಾರತದ ಸ್ವಾತಂತ್ರ್ಯದ ನಾಂದಿ ಚಿತ್ತಗಾಂಗ್ ಗ್ರಾಮದಿಂದಲೇ ಪ್ರಾರಂಭವಾಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದ ಮಾಸ್ಟರ್‌ದಾ ಅದಕ್ಕಾಗಿ ಸಂಘಟನೆಗೆ ಮುಂದಾದರು.

ಶಿಕ್ಷಕರಾಗಿದ್ದರಿಂದ ಸಂಘಟನೆಯ ಕಾರ್ಯ ಅವರಿಗೆ ಅಷ್ಟೇನೂ ಕಷ್ಟವಾಗಲಿಲ್ಲ. ತನ್ನದೇ ಶಾಲೆಯಲ್ಲಿನ ಕೇವಲ 14–15 ವರ್ಷದೊಳಗಿನ ಪುಟ್ಟ ವಿದ್ಯಾರ್ಥಿಗಳೇ ಸೂರ್ಯಸೇನರ ಜೊತೆ ಸಹಕರಿಸಲು ಸಿದ್ಧರಾದರು. ಸುಮಾರು 60 ವಿದ್ಯಾರ್ಥಿಗಳ ದೊಡ್ಡ ಸೈನ್ಯವೇ ತಯಾರಾಯಿತು. ಗಣೇಶ್ ಘೋಷ್, ಅನಂತ ಸಿಂಹ, ನಿರ್ಮಲ್ ಸೇನ್, ಲೊಕನಾಥ ಬಲ್, ಅಂಬಿಕಾ ಚಕ್ರವರ್ತಿ, ಪ್ರೀತಿಲತಾ ವದ್ದೆದಾರ್, ಕಲ್ಪನಾದತ್ತರ ನಾಯಕತ್ವದಲ್ಲಿ ಅನೇಕ ಪಡೆಗಳು ತಯಾರಾದವು. ಹರಿಗೊಪಾಲ್ ಬಲ್, ದೇವಪ್ರಸಾದ್ ಗುಪ್ತಾ, ಆನಂದಪ್ರಸಾದ ಗುಪ್ತಾ, ಹರಿಪಾದ ಚಕ್ರವರ್ತಿ, ಜಿಬನ್ ಘೋಶಾಲ್ ಮುಂತಾದ ಉತ್ಸಾಹಿ ತರುಣರು ಆ ತಂಡಗಳಲ್ಲಿದ್ದರು.

1930 ಏಪ್ರಿಲ್ 18, ಸೂರ್ಯಸೇನರ ಯೋಜನೆಯಂತೆ ರಾತ್ರಿ 10 ಗಂಟೆಗೆ ಚಿತ್ತಗಾಂಗ್‌ನ ಎಲ್ಲ ಆಂಗ್ಲಕಛೇರಿಗಳ ಮೇಲೆ ಹಠಾತ್ತಾಗಿ ದಾಳಿ ಮಾಡಲಾಯಿತು. ಗಣೇಶ್ ಘೋಷ್ರ ತಂಡ ಪೊಲೀಸ್ ಶಸ್ತ್ರಾಗಾರವನ್ನು ವಶಪಡಿಸಿಕೊಂಡರೆ, ಲೋಕನಾಥನ ತಂಡ 'ಅರೆಸೈನ್ಯ'ದ ಶಸ್ತ್ರಾಗಾರಕ್ಕೆ ಮುತ್ತಿಗೆ ಹಾಕಿತು. ಅಂಬಿಕಾ ಚಕ್ರವರ್ತಿಯ ಜೊತೆಗಾರರು, ಚಿತ್ತಗಾಂಗ್ ಸೇರುವ ಎಲ್ಲ ರೈಲ್ವೆ ಮಾರ್ಗಗಳನ್ನು ಕಡಿದುಹಾಕಿದರು. ನಿರ್ಮಲ್ ಸೇನ್ ಟೆಲಿಗ್ರಾಫ್ ಸಂಪರ್ಕವನ್ನು ಕಡಿತಗೊಳಿಸಿದ. ಈ ಎಲ್ಲ ಕಾರ್ಯಗಳ ನಂತರ, ಸೂರ್ಯಸೇನನ ನಾಯಕತ್ವದಲ್ಲಿ, ಪೊಲೀಸ್ ಶಸ್ತ್ರಾಗಾರದ ಮುಂದೆ ಎಲ್ಲರೂ ಸೇರಿ, ಅಲ್ಲೇ ಭಾರತದ ಬಾವುಟ ಹಾರಿಸಿ, "ವಂದೇ ಮಾತರಂ" ಹೇಳಿ, ಚಿತ್ತಗಾಂಗ್ ಸ್ವತಂತ್ರ ಎಂದು ಘೋಷಿಸಿಯೇ ಬಿಟ್ಟರು.

ಆನಂತರ, ಚಿತ್ತಗಾಂಗ್‌ನ ಪರ್ವತಶ್ರೇಣಿಗಳಲ್ಲಿ ಕ್ರಾಂತಿಕಾರಿಗಳು ಅಡಗಿಕೊಂಡರು. ಸುಳಿವನ್ನು ಹಿಡಿದು ಬೆನ್ನುಹತ್ತಿದ ಆಂಗ್ಲರು, ಇಡೀ ಪರ್ವತವನ್ನು ಸುತ್ತುವರೆದರು. ಸುಮಾರು 80 ಬ್ರಿಟಿಷ್ ಪಡೆಗಳು ಪುಟ್ಟ ವಿದ್ಯಾರ್ಥಿಗಳ ಪಡೆಯ ಮೇಲೆ ಗುಂಡಿನ ದಾಳಿ ನಡೆಸಿದವು. 12 ವಿದ್ಯಾರ್ಥಿಗಳು ಆ ಹೋರಾಟದಲ್ಲಿ ವೀರಮರಣಕಂಡರು. ಕೆಲವರು ತಪ್ಪಿಸಿಕೊಂಡು ಕೋಲ್ಕತ್ತಾಕ್ಕೆ ಹೋದರೆ ಸೂರ್ಯಸೇನ್ ಮಾತ್ರ ಬ್ರಿಟಿಷರ ಕೈಗೆ ಸಿಗದೇ ವೇಷಮರೆಸಿಕೊಂಡಿದ್ದರು. ಆದರೂ ಕೊನೆಗೆ, 'ನೇತ್ರ ಸೇನ್' ಎಂಬ ದ್ರೋಹಿಯ ಪಿತೂರಿಯಿಂದ, ಸೂರ್ಯಸೇನ್ ಬಂಧಿತರಾಗಬೇಕಾಯಿತು. ಆ ಸಿಟ್ಟಿಗೆ, ಉಳಿದ ಕ್ರಾಂತಿ ಯುವಕರು ಆ ಮನೆಮುರುಕನನ್ನು ಕೊಂದು, ದೇಶದ್ರೋಹಕ್ಕೆ ಸಾವೇ ಶಿಕ್ಷೆ ಎಂದು ತೋರಿಸಿದರು.

ಬಂಧಿತ ಸೂರ್ಯಸೇನನ ವಿಚಾರಣೆ ನಡೆದು, ಅವರಿಗೆ ಜುಗಾಂತರ ಪಾರ್ಟಿಯ ತಾರಕೇಶ್ವರ ದಸ್ತಿದಾರರ ಜೊತೆ ಗಲ್ಲು ಶಿಕ್ಷೆ ಪ್ರಕಟಿಸಲಾಯಿತು. 12 ಜನವರಿ 1934ರಂದು ಮೆಡಿನಿಪುರ ಜೈಲಿನಲ್ಲಿ ಬ್ರಿಟಿಷರು ಅಸಹನೀಯ ಚಿತ್ರಹಿಂಸೆಯ ನಂತರ ಗಲ್ಲಿಗೇರಿಸಿದರು. ಸಾವಿಗೂ ಮುಂಚೆ ಆತ ತನ್ನ ಜೊತೆಗಾರರಿಗೆ ಬರೆದ ಪತ್ರದಲ್ಲಿ ನೀಡಿದ ಸಂದೇಶ ಹೀಗಿತ್ತು – "ಸಾವು ನನ್ನನ್ನು ಆಲಂಗಿಸುತ್ತಿದೆ, ಆ ಅನಂತದೆಡೆಗೆ ನಾನು ಹೊರಟಿದ್ದೇನೆ, ಮಾತೃಭೂಮಿಗೆ ಪ್ರಾಣ ಕೊಡುತ್ತಿರುವ ಈ ಸೌಭಾಗ್ಯದ ಸಂದರ್ಭದಲ್ಲಿ, ನಾನು ನಿಮಗೆ ನೀಡುವ ಆದೇಶ ಒಂದೇ, ಅದು ನನ್ನ ದೇಶದ ಸ್ವರಾಜ್ಯದ ಕನಸು. ಚಿತ್ತಗಾಂಗ್‌ನ ಕ್ರಾಂತಿಯನ್ನು ಎಂದಿಗೂ ಮರೆಯಬೇಡಿ. ನಿಮ್ಮ ಮನದಲ್ಲಿ, ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದ ಎಲ್ಲ ವೀರರ ಹೆಸರನ್ನು ರಕ್ತದಲ್ಲಿ ಬರೆದುಕೊಳ್ಳಿ ಮತ್ತು ಸ್ವಾತಂತ್ರ್ಯ ಸಿಗುವವರೆಗೂ ಹೋರಾಟ ನಿಲ್ಲಿಸದಿರಿ".

**ಸಂಪಾದಕೀಯ ಸಹಕಾರ** ಶೈಲೇಶ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್, ಸತ್ಯನಾರಾಯಣ ಶಾನಭಾಗ್, ಶ್ರೀನಿವಾಸ ಹೆಗಡೆ, ಶ್ರೀವತ್ಸ ಸಿ.ಎಮ್., ಪ್ರತಾಪ ಕೊಡಂಚ



ಕರ್ನಾಟಕದಲ್ಲಿ ಕಳೆದ 5 ವರ್ಷಗಳ ಅವಧಿಯಲ್ಲಿ 3,515 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವ ಕಳವಳಕಾರಿ ವಿಷಯ ರಾಜ್ಯ ಕೃಷಿ ಇಲಾಖೆ ನೀಡಿದ ಅಂಕಿ ಅಂಶಗಳಿಂದ ತಿಳಿದುಬಂದಿದೆ. ಏಪ್ರಿಲ್ 2013ರಿಂದ 2017ರ ನವೆಂಬರ್‌ವರೆಗೆ 3,515 ರೈತರು ಆತ್ಮಹತ್ಯೆ ಶರಣಾಗಿದ್ದು, ಇವುಗಳ ಪೈಕಿ 2,525 ರೈತರು ಬರ, ಬೆಳೆಹಾನಿಗಳ ಪರಿಣಾಮವಾಗಿಯೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವರದಿ ತಿಳಿಸಿದೆ. 2017ರ ಏಪ್ರಿಲ್-ನವೆಂಬರ್ ತಿಂಗಳ ನಡುವೆ ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ. ಆದರೆ ಈ ಅವಧಿಯಲ್ಲಿಯೂ ರಾಜ್ಯದ 624 ರೈತರ ಆತ್ಮಹತ್ಯೆ ಪ್ರಕರಣಗಳು ಬೆಳಕಿಗೆ ಬಂದಿವೆ. ಇದರಲ್ಲಿ 416 ಪ್ರಕರಣಗಳು ಕೃಷಿ ಸಂಬಂಧಿ ತೊಂದರೆಯ ಕಾರಣಕ್ಕಾಗಿಯೇ ನಡೆದ ಆತ್ಮಹತ್ಯೆಗಳು ಎಂದು ವರದಿ ಹೇಳಿದೆ.

**ಮುಂದಿನ ವರ್ಷ 2018ರಲ್ಲಿ ಡಾಲರ್ ಮಾನದಂಡದಲ್ಲಿ ಯುನೈಟೆಡ್ ಕಿಂಗ್‌ಡಮ್ ಮತ್ತು ಫ್ರಾನ್ಸ್ ದೇಶಗಳನ್ನು ಹಿಂದಿಕ್ಕಲಿರುವ ಭಾರತ ವಿಶ್ವದ ಐದನೇ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದು ಸೆಂಟರ್ ಫಾರ್ ಎಕಾನಾಮಿಕ್ಸ್ ಬ್ಯುಸಿನೆಸ್ ರಿಸರ್ಚ್ ಸಂಸ್ಥೆ ತನ್ನ ವರದಿಯಲ್ಲಿ ತಿಳಿಸಿದೆ. ಪ್ರಸ್ತುತ 2.4 ಟ್ರಿಲಿಯನ್ ಡಾಲರ್ ಗಾತ್ರದ ಆರ್ಥಿಕತೆ ಹೊಂದಿರುವ ಭಾರತ ತಲಾವಾರು ಜಿಡಿಪಿ (ಪಿಪಿಪಿ) ಮಾನದಂಡದ ಪ್ರಕಾರ ಮೂರನೇ ಸ್ಥಾನದಲ್ಲಿದೆ. ಇದೇ ವರದಿಯ ಪ್ರಕಾರ 2032ರ ವೇಳೆಗೆ ಚೀನಾದ ಆರ್ಥಿಕತೆ ಅಮೆರಿಕವನ್ನು ಹಿಂದಿಕ್ಕಿ ವಿಶ್ವದ ಮೊದಲನೆಯ ಸ್ಥಾನಕ್ಕೆ ಬರಲಿದೆ. 2025ರ ವೇಳೆಗೆ ಭಾರತದ ಆರ್ಥಿಕತೆಯ ಗಾತ್ರ 5 ಟ್ರಿಲಿಯನ್ ಡಾಲರ್ ಮೀರಲಿದೆ ಎಂದು ಮಾರ್ಗನ್ ಸ್ಟಾನ್ಲಿ ಸಂಸ್ಥೆ ತನ್ನ ವರದಿಯಲ್ಲಿ ಹೇಳಿದೆ.**


ಇಸ್ರೇಲ್‌ನಲ್ಲಿ ಗ್ಯಾಸ್ ನಿಕ್ಷೇಪವನ್ನು ಕಂಡುಹಿಡಿಯಲು ಭಾರತ ಅನುಮತಿ ಪಡೆದುಕೊಂಡಿದೆ. ಇದು ಇಸ್ರೇಲಿನ ಎಕ್ಸ್‌ಕ್ಲೂಸಿವ್ ಎಕನಾಮಿಕ್ ಝೋನ್‌ನಲ್ಲಿ ತೈಲ ನಿಕ್ಷೇಪವನ್ನು ಕಂಡುಹಿಡಿಯಲು ಕರೆದ ಮೊಟ್ಟಮೊದಲ ಟೆಂಡರ್ ಆಗಿದ್ದು ಭಾರತದ ಆಯಿಲ್ ಎಂಡ್ ನಾಚುರಲ್ ಗ್ಯಾಸ್ ಕಾರ್ಪೋರೇಷನ್ ವಿದೇಶ್‌ನ ಮುಂದಾಳತ್ವದಲ್ಲಿ ಇಂಡಿಯನ್ ಆಯಿಲ್, ಆಯಿಲ್ ಇಂಡಿಯಾ, ಭಾರತ್ ಪೆಟ್ರೋಲಿಯಂ ಕಂಪನಿಗಳ ಒಕ್ಕೂಟ ಟೆಂಡರ್ ಹರಾಜಿನಲ್ಲಿ ಗೆಲುವು ಸಾಧಿಸಿದೆ. ಪಾಕಿಸ್ತಾನವನ್ನು ಹೊರಗಿಟ್ಟು ಅಫ್ಘಾನಿಸ್ತಾನ ಮತ್ತು ಮಧ್ಯ ಏಷಿಯಾಕ್ಕೆ ಸಂಪರ್ಕ ಕಲ್ಪಿಸುವ ಸಲುವಾಗಿ ಇರಾನ್‌ನ ಚಾಬಹಾರ್ ಬಂದರನ್ನು ಭಾರತ ಅಭಿವೃದ್ಧಿಪಡಿಸಿತ್ತು. ಆದರೆ ಭಾರತಕ್ಕೆ ಫರ್ಜದ್-ಬಿ ಗ್ಯಾಸ್ ನಿಕ್ಷೇಪದಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ನೀಡುವಲ್ಲಿ ಇರಾನ್ ಹಿಂದೆ ಮುಂದೆ ನೋಡುತ್ತಿತ್ತು. ಈ ಸಂದರ್ಭದಲ್ಲಿಯೇ ಭಾರತ ಇರಾನ್‌ನ ಕಟ್ಟಾ ವಿರೋಧಿ ಇಸ್ರೇಲ್ ಜೊತೆ ಒಪ್ಪಂದ ಮಾಡಿಕೊಂಡಿರುವುದು ಮಹತ್ವದ ಬೆಳವಣಿಗೆಯಾಗಿದೆ. ಜೆರುಸಲೇಮ್ ನಗರವನ್ನು ಇಸ್ರೇಲಿನ ರಾಜಧಾನಿಯೆಂದು ಗುರುತಿಸುವ ಸಲುವಾಗಿ ವಿಶ್ವಸಂಸ್ಥೆಯಲ್ಲಿ ಅಮೆರಿಕ ಮುಂದಿಟ್ಟ ಪ್ರಸ್ತಾವನೆಯ ವಿರುದ್ಧ ಭಾರತ ಮತ ಚಲಾಯಿಸಿದ್ದನ್ನು ಇಲ್ಲಿ ಗಮನಿಸಬಹುದು. ಭಾರತದ ವಿಶಿಷ್ಟ ವಿದೇಶಾಂಗ ನೀತಿಯನ್ನು ಇದು ತೋರಿಸುತ್ತದೆ.

**ಪ್ಯಾರಿಸ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಹೊರತಂದಿರುವ ವಿಶ್ವ ಅಸಮಾನತೆ ವರದಿ 2018** (World Inequality Report) **ಭಾರತದ ಶೇ. 10ರಷ್ಟು ಜನರು ರಾಷ್ಟ್ರೀಯ ಆದಾಯದ ಸುಮಾರು ಶೇ. 60ರಷ್ಟು ಪಾಲನ್ನು ಹೊಂದಿದ್ದಾರೆ ಎಂದು ಹೇಳಿದೆ. ಭಾರತದಲ್ಲಿ ಬಡವರು ಮತ್ತು ಶ್ರೀಮಂತರ ನಡುವಿನ ಅಸಮಾನತೆ ಹೆಚ್ಚುತ್ತಲೇ ಇದೆ ಎಂದು ವರದಿ ತಿಳಿಸಿದೆ.**

ದೇಶದಲ್ಲೇ ಮೊದಲ ಬಾರಿಗೆ ಮಂಗಳೂರಿನ ಎಜೆ ಆಸ್ಪತ್ರೆಯ ವೈದ್ಯರು 2 ವರ್ಷದ ಮಗುವಿನ ಕಾಲನ್ನು ಯಶಸ್ವಿಯಾಗಿ ಮರುಜೋಡಣೆಗೊಳಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಆರು ತಿಂಗಳ ಹಿಂದೆ ಪಯ್ಯನೂರಿನ ರೈಲು ಅಪಘಾತಕ್ಕೀಡಾಗಿ ಮಗುವಿನ ಕೆಳ ಕಾಲು ಪ್ರತ್ಯೇಕಗೊಂಡಿತ್ತು. ಸ್ಥಳೀಯ ಆಸ್ಪತ್ರೆಗೆ ಸಾಗಿಸಿ ಮಗುವಿಗೆ ಪ್ರಥಮ ಚಿಕಿತ್ಸೆ ನೀಡಲಾಯಿತು. ಅಲ್ಲಿನ ವೈದ್ಯರ ಸಲಹೆಯಂತೆ ಮಗುವನ್ನು ಎಜೆ ಆಸ್ಪತ್ರೆಗೆ ಕರೆತರಲಾಯಿತು. ಪ್ರತ್ಯೇಕಗೊಂಡ ಮಗುವಿನ ಕಾಲನ್ನು ಸಂರಕ್ಷಿಸಿಟ್ಟು, ಮೈಕ್ರೋ ವ್ಯಾಸ್ಕ್ಯುಲರ್ ಸರ್ಜರಿ ಮೂಲಕ ಎಜೆ ಆಸ್ಪತ್ರೆ ವೈದ್ಯರು ಮರುಜೋಡಣೆಗೊಳಿಸಿದ್ದಾರೆ. ಜಗತ್ತಿನಲ್ಲಿಯೇ ಇಂತಹ ಯಶಸ್ವಿ ಸರ್ಜರಿಗಳು ನಡೆದ ಸಂಖ್ಯೆ ಕೇವಲ 13 ಮಾತ್ರ. ಅದರಲ್ಲಿ 4 ಮಂದಿ ಮಕ್ಕಳ ಕಾಲನ್ನು ಮರುಜೋಡಣೆ ಮಾಡಲಾಗಿದೆ. ಆದರೆ ಇದೇ ಮೊದಲ ಬಾರಿಗೆ ಮಂಗಳೂರಿನ ವೈದ್ಯರು ಈ ಸಾಧನೆ ಮಾಡಿದ್ದಾರೆ.

## ಡಾ. ಎಸ್.ಆರ್. ರಾಮಸ್ವಾಮಿ ಅವರ 'ದೀಪ್ತಶೃಂಗಗಳು' ಗ್ರಂಥದ ಲೋಕಾರ್ಪಣೆ

ಹಿರಿಯ ಪತ್ರಕರ್ತ, ಚಿಂತಕ ಡಾ. ಎಸ್.ಆರ್. ರಾಮಸ್ವಾಮಿ ಅವರು ಬರೆದಿರುವ "ದೀಪ್ತಶೃಂಗಗಳು" ಗ್ರಂಥದ ಲೋಕಾರ್ಪಣೆ ಡಿಸೆಂಬರ್ 17ರಂದು ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ನಡೆಯಿತು.




ಬೇರೆಯವರಿಂದ ಮನ್ನಣೆಯನ್ನಾಗಲಿ ಪದವಿ ಗೌರವವನ್ನಾಗಲಿ ಎದುರುನೋಡದೆ ಸದಾ ಲೋಕಹಿತಕ್ಕಾಗಿ ಶ್ರಮಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡ ಹಲವರು ಇರುತ್ತಾರೆ. ಇವರಿಗೆ ಶೀತಲತೆಯನ್ನು ನೀಡುವುದಕ್ಕಾಗಿಯೇ ಬಾಳುವ ಅದಕ್ಕಾಗಿಯೇ ತಮ್ಮ ಜೀವನವನ್ನು ಶ್ರೀಗಂಧದಂತೆ ತೇಯುವ ಮನೋವೃತ್ತಿಯ ಇಂತಹ ಸಜ್ಜನರನ್ನು ಕವಿಗಳು 'ರತ್ನದೀಪಗಳು' ಎಂದು ವರ್ಣಿಸಿದ್ದಾರೆ. ಹೀಗೆ ನಮ್ಮ ನಡುವೆಯೇ ಇದ್ದು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಸಮುನ್ನತರೆನಿಸಿದ 7 ಮಂದಿ ರತ್ನದೀಪಗಳನ್ನು ಈ ಪುಸ್ತಕದಲ್ಲಿ ಎಸ್.ಆರ್. ರಾಮಸ್ವಾಮಿ ಅವರು ಪರಿಚಯಿಸಿದ್ದಾರೆ. ವಿದ್ವತ್ತಿನ ಮೇರುಸದೃಶರಾದ ಎಸ್. ರಂಗನಾಥ ಶರ್ಮಾ ಮತ್ತು ಎಸ್.ಕೆ. ರಾಮಚಂದ್ರರಾವ್, ಅಧ್ಯಾತ್ಮವಿದ್ಯಾಪ್ರಸಾರಕ ವೇದಾಂತ ಸುಬ್ಬಯ್ಯ, ಜೋಳಿಗೆಮಾತ್ರದ ಆಸರೆಯಿಂದ ಸೇವಾಸಾಮ್ರಾಜ್ಯ ನಿರ್ಮಿಸಿದ ಬೆಳಗೆರೆ ಕೃಷ್ಣಶಾಸ್ತ್ರೀ, ಸಂಗೀತಕಲಾಪ್ರವರ್ತನೆಯ ಮೂಲಕ ನಾಡಿನ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸಿದ ಎಸ್.ವಿ. ನಾರಾಯಣಸ್ವಾಮಿರಾವ್, ಜನಸೇವಕಾಗ್ರಣಿ ಟಿ.ಆರ್. ಶಾಮಣ್ಣ, ಗ್ರಂಥಾಲಯ ವಿಜ್ಞಾನ ಪಿತಾಮಹ ಎಸ್.ಆರ್. ರಂಗನಾಥ್ - ಈ ಏಳು ಮಂದಿ ಅಸಾಮಾನ್ಯ ಸಾಧಕರ ವ್ಯಕ್ತಿತ್ವಚಿತ್ರಣಗಳನ್ನು ಈ ಪುಸ್ತಕದಲ್ಲಿ ಕಾಣಬಹುದು. ಈ ಎಲ್ಲ ಮಹನೀಯರ ಜೊತೆ ಲೇಖಕರಾದ ರಾಮಸ್ವಾಮಿಯವರಿಗೆ ಅನೇಕ ವರ್ಷಗಳ ಕಾಲ ಒಡನಾಟವಿತ್ತು, ಈ ಒಡನಾಟದಲ್ಲಿ ಅವರು ಕಂಡುಕೊಂಡ ಅನೇಕ ಸಂಗತಿಗಳನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ.

**ಪ್ರಕಾಶಕರು:** ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು **ಬೆಲೆ:** ರೂ. 135
**ಪ್ರತಿಗಳಿಗಾಗಿ ಸಂಪರ್ಕಿಸಿ:** ರಾಷ್ಟ್ರೋತ್ಥಾನ ಸಾಹಿತ್ಯ, ಕೇಶವಶಿಲ್ಪ, ಕೆಂಪೇಗೌಡನಗರ ಬೆಂಗಳೂರು - 560 019,
ದೂ: 080-26612730

## ಸಾಲುದ್ದದ ಸುದ್ದಿಗಳು

**ನಾಪತ್ತೆಯಾದ 50 ಸ್ಮಾರಕಗಳ ಪತ್ತೆಗೆ ಭಾರತೀಯ ಪುರಾತತ್ವ ಇಲಾಖೆಯು ಸಮೀಕ್ಷೆ ನಡೆಸಲಿದೆ ಎಂದು ಕೇಂದ್ರ ಸಂಸ್ಕೃತಿ ಸಚಿವಾಲಯ ತಿಳಿಸಿದೆ. ಈ ಸ್ಮಾರಕಗಳನ್ನು ಪತ್ತೆ ಮಾಡಲು, ಮರಳಿ ಪಡೆಯಲು, ಅವುಗಳ ಹಳೆಯ ದಾಖಲೆ, ಮ್ಯಾಪ್, ಪ್ರಕಟಗೊಂಡ ವರದಿ, ತನಿಖೆಗಳನ್ನು ನಡೆಸಲು ತಂಡಗಳನ್ನು ರಚಿಸಲಾಗಿದೆ. ವೇಗವಾಗಿ ನಡೆಯುತ್ತಿರುವ ನಗರೀಕರಣದ ಹಾಗೂ ಒತ್ತುವರಿಗಳ ಪರಿಣಾಮವಾಗಿ ಹಲವಾರು ಅತ್ಯಮೂಲ್ಯ ಸ್ಮಾರಕಗಳು ಕಳೆದುಹೋಗಿವೆ. ಇವುಗಳ ಪತ್ತೆ ಕಾರ್ಯಕ್ಕಾಗಿ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಸಚಿವಾಲಯ ಹೇಳಿದೆ.**



ತನ್ನ ಹಣವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳದೇ ಪಾಕಿಸ್ತಾನವು ಅಮೆರಿಕದ ಜತೆಗೆ ಡಬಲ್ ಗೇಮ್ ಆಡುತ್ತಿದೆ ಎಂಬ ದೃಢ ನಿಲುವು ತಳೆದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಪಾಕಿಸ್ತಾನಕ್ಕೆ ನೀಡಲಾಗುವ ನೆರವನ್ನು ಸ್ಥಗಿತಗೊಳಿಸಲಾಗುವುದು ಎಂದು ಜನವರಿ 1 ರಂದು ಟ್ವೀಟ್ಟರ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಪಾಕಿಸ್ತಾನಕ್ಕೆ ಕಳೆದ 15 ವರ್ಷಗಳಿಂದ 33 ಶತಕೋಟಿ ಡಾಲರ್ ನೆರವನ್ನು ಅಮೆರಿಕ ನೀಡಿದೆ. ಆದರೆ ಪಾಕಿಸ್ತಾನ ಮಾಡಿದ್ದೇನು? ಇದಕ್ಕೆ ಪ್ರತಿಯಾಗಿ ಪಾಕ್ ನಮಗೆ ನೀಡಿದ್ದು ಸುಳ್ಳು ಮತ್ತು ಬರೀ ಮೋಸ. ಅಫ್ಘಾನಿಸ್ತಾನದಲ್ಲಿ ನಾವು ಉಗ್ರರ ಬೇಟೆಯಾಡುತ್ತಿದ್ದರೆ ಅವರು ತಮ್ಮ ನೆಲದಲ್ಲಿ ಉಗ್ರರಿಗೆ ರಕ್ಷಣೆ ನೀಡುತ್ತಿದ್ದರು. ಅವರಿಂದ ನಮಗಾಗಿದ್ದು ಕಿಂಚಿತ್ ಲಾಭವಷ್ಟೇ ಎಂದಿದ್ದಾರೆ. ಹಲವು ವರ್ಷಗಳಿಂದ ಭಾರತ ಇದನ್ನೇ ಹೇಳುತ್ತಿದ್ದು, ಭಾರತದ ವಾದಕ್ಕೆ ಇದೀಗ ಮತ್ತಷ್ಟು ಮಹತ್ವ ದೊರೆತಿದೆ. ವಿಶ್ವಸಂಸ್ಥೆಯಲ್ಲಿ ಅಮೆರಿಕದ ರಾಯಭಾರಿಯಾಗಿರುವ ನಿಕ್ಕಿ ಹ್ಯಾಲೆ ಕೂಡ ಟ್ರಂಪ್ ಮಾತನ್ನು ಸಮರ್ಥಿಸಿದ್ದು, ಈ ಎಲ್ಲ ವರ್ಷಗಳಲ್ಲಿ ಪಾಕಿಸ್ತಾನ ಡಬಲ್ ಗೇಮ್ ಆಡಿದೆ. ಪಾಕಿಸ್ತಾನದ ಈ ಆಟವನ್ನು ಅಮೆರಿಕದ ಹಾಲಿ ಆಡಳಿತ ಸಹಿಸಿಕೊಳ್ಳುವುದಿಲ್ಲ. ಒಂದೊಮ್ಮೆ ಪಾಕಿಸ್ತಾನವು ಉಗ್ರರಿಗೆ ಆಶ್ರಯ ನೀಡುವುದನ್ನು ನಿಲ್ಲಿಸದಿದ್ದರೆ ಅಮೆರಿಕದಿಂದ ದೊರೆಯುವ ಎಲ್ಲ ನೆರವನ್ನು ಕಡಿತ ಮಾಡುವ ಎಚ್ಚರಿಕೆಯನ್ನು ಅವರು ನೀಡಿದ್ದಾರೆ.



**ಕಟ್ಟರ್ ಸಂಪ್ರದಾಯವಾದಿ ಇಸ್ಲಾಂ ರಾಷ್ಟ್ರ ಸೌದಿ ಅರೇಬಿಯಾ ನಿಧಾನಕ್ಕೆ ಆಧುನಿಕ ಜಗತ್ತಿನ ಮುಖ್ಯವಾಹಿನಿಗೆ ತೆರೆದುಕೊಳ್ಳುತ್ತಿದೆ. ಸಿನಿಮಾ ಪ್ರದರ್ಶನಕ್ಕೆ ಇದ್ದ ನಿಷೇಧವನ್ನು ಅದು ತೆರವುಗೊಳಿಸಿದೆ. 2018ರಿಂದ ಸೌದಿಯಲ್ಲಿ ಸಿನಿಮಾಗಳು ಪ್ರದರ್ಶನಗೊಳ್ಳಲಿದೆ. 2030ರ ವೇಳೆಗೆ ಅಲ್ಲಿ 300 ಚಿತ್ರ ಮಂದಿರಗಳು ಆರಂಭವಾಗಲಿವೆ. ಇದರಿಂದ 30 ಸಾವಿರ ಮಂದಿಗೆ ಉದ್ಯೋಗ ದೊರಕುವ ನಿರೀಕ್ಷೆಯಿದೆ. ಸೌದಿ ಅರೇಬಿಯಾ ಸರ್ಕಾರ 1980ರಲ್ಲಿ ಸಿನಿಮಾಗಳ ಪ್ರದರ್ಶನವನ್ನು ಕಾನೂನುಬಾಹಿರಗೊಳಿಸಿ ಆದೇಶಿಸಿತ್ತು. ಇದೀಗ ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳನ್ನು ತರುತ್ತಿದ್ದು, ಮಹಿಳೆಯರಿಗೆ ಡ್ರೈವಿಂಗ್ ಲೈಸೆನ್ಸ್, ಉದ್ಯೋಗ ಅವಕಾಶ ನೀಡಿದ ಬಳಿಕ ಇದೀಗ ಸಿನಿಮಾ ಪ್ರದರ್ಶನಕ್ಕೆ ಅವಕಾಶ ನೀಡುತ್ತಿದ್ದಾರೆ.**

## ಕಸದಿಂದ ಕಾಸು ಗಳಿಸುತ್ತಿರುವ ಮೈಸೂರು ಮಹಾನಗರ ಪಾಲಿಕೆ

ಕಸಸಂಗ್ರಹಣೆ ಮತ್ತು ವಿಲೇವಾರಿ ನಗರಗಳ ಬಹುದೊಡ್ಡ ಸಮಸ್ಯೆಯಾಗಿರುವ ನಡುವೆ ಮೈಸೂರು ಮಹಾನಗರ ಪಾಲಿಕೆ ಪರಿಹಾರ ಕಂಡುಕೊಂಡಿದ್ದಲ್ಲದೇ ಆದಾಯವನ್ನೂ ಗಳಿಸುತ್ತಿದೆ. ಲ್ಯಾಂಡ್‌ಫಿಲ್‌ಗಳಿಂದ ಸಂಪೂರ್ಣ ಮುಕ್ತಿ ಪಡೆಯುವ ಗುರಿ ಹೊಂದಿರುವ ಮೈಸೂರು ಮಹಾನಗರಪಾಲಿಕೆ ಮನೆಗಳಲ್ಲೇ ಕಸವಿಂಗಡನೆ ಮಾಡುವುದನ್ನು ಕಡ್ಡಾಯ ಮಾಡಿದೆ. ವಿಂಗಡಿಸಿದ ಜೈವಿಕ ಹಾಗೂ ಅಜೈವಿಕ ಕಸಗಳನ್ನು ಸಂಗ್ರಹಿಸಿ ಒಂದು ಕಾಂಪೋಸ್ಟ್ ಕೇಂದ್ರ ಮತ್ತು ಒಂಭತ್ತು ಪುನರ್ವಿಂಗಡನಾ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ಇಲ್ಲಿ ಲೋಹ, ರಬ್ಬರ್, ಪ್ಲಾಸ್ಟಿಕ್‌ಗಳನ್ನು ಮತ್ತೆ ಪುನರ್ವಿಂಗಡನೆಗೊಳಿಸಿ ಗುಜರಿ ವ್ಯಾಪಾರಿಗಳಿಗೆ ಮಾರಾಟಮಾಡಲಾಗುತ್ತದೆ.

ಹೆಚ್ಚಿನ ಪುನರ್ವಿಂಗಡನಾ ಕೇಂದ್ರಗಳು ಸ್ಥಳೀಯ ನಾಗರಿಕರು ಮತ್ತು ಸ್ವಯಂಸೇವಕರಿಂದ ನಡೆಸಲ್ಪಡುತ್ತಿವೆ. ಗುಜರಿ ಮತ್ತು ಕಾಂಪೋಸ್ಟ್‌ಗಳ ಮಾರಾಟದಿಂದ ಬರುವ ಹಣದಿಂದ ಈ ಕೇಂದ್ರಗಳು ನಡೆಯುವುದಲ್ಲದೇ ಮಹಾನಗರ ಪಾಲಿಕೆಗೆ ಆದಾಯವನ್ನೂ ತರುತ್ತಿದೆ. ಕಾಂಪೋಸ್ಟ್ ಪ್ಲಾಂಟ್ ನಡೆಸಲು ಬೇಕಾದ ಶೇ. 70ರಷ್ಟು ವೆಚ್ಚ ಗೊಬ್ಬರ ಮಾರಾಟದಿಂದ ದೊರಕುತ್ತಿದ್ದು ಉಳಿದ ವೆಚ್ಚವನ್ನು ಸ್ವಚ್ಛ ಭಾರತ ಮಿಶನ್ ಅಡಿಯಲ್ಲಿ ಸಿಗುವ ಅನುದಾನದಲ್ಲಿ ಸರಿದೂಗಿಸಲಾಗುತ್ತದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10, January 2018

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10th and 25th of every Month REG.NO.CPMG/KA/BGS/102/2018-20

FORTNIGHTLY 15-1-2018



# ಭಾರತೀಯ ಸೇನೆಯಿಂದ ಯೋಧರ ಸಾವಿಗೆ ಪ್ರತೀಕಾರ

ಗಡಿಯಲ್ಲಿನ ಗುಂಡಿನ ದಾಳಿಗೆ ಹುತಾತ್ಮರಾದ ನಾಲ್ಕು ಸೈನಿಕರ ಸಾವಿಗೆ ಪ್ರತೀಕಾರ ನಡೆಸಿದ ಭಾರತೀಯ ಸೇನೆ ಗಡಿನಿಯಂತ್ರಣ ರೇಖೆಯನ್ನು ದಾಟಿ ಮೂರು ಪಾಕಿಸ್ತಾನಿ ಸೈನಿಕರನ್ನು ಹೊಡೆದುರುಳಿಸಿ ಇನ್ನೋರ್ವನನ್ನು ತೀವ್ರವಾಗಿ ಗಾಯಗೊಳಿಸಿದೆ. ಕಳೆದ ಡಿಸೆಂಬರ್ 23ರಂದು ರಾಜೌರಿ ಪ್ರದೇಶದ ಖೇರಿಯಲ್ಲಿ ಯುದ್ಧವಿರಾಮವನ್ನು ಉಲ್ಲಂಘಿಸಿದ ಪಾಕಿಸ್ತಾನಿ ಸೇನೆ ಮೂರು ಯೋಧರು ಮತ್ತು ಓರ್ವ ಮೇಜರ್‌ರನ್ನು ಹತ್ಯೆ ಮಾಡಿದ್ದಕ್ಕಾಗಿ ತಕ್ಕ ಪಾಠ ಕಲಿಸಲು ರಾವಲ್‌ಕೋಟ್ ಪ್ರದೇಶದಲ್ಲಿ ಗಡಿನಿಯಂತ್ರಣ ರೇಖೆಯನ್ನು ದಾಟಿ ಸುಮಾರು 200–300 ಮೀಟರ್ ಮುನ್ನುಗ್ಗಿದ ಘಾತಕ್ ಕಮಾಂಡೋಗಳ ಐದು ಜನರ ತಂಡ ಈ ಕಾರ್ಯಾಚರಣೆ ನಡೆಸಿದೆ.

ಉರಿ ಭಯೋತ್ಪಾದಕ ದಾಳಿಯ ನಂತರ ನಡೆದ ಸರ್ಜಿಕಲ್ ಸ್ಟ್ರೈಕ್‌ನ ನಂತರ ಪ್ರತೀಕಾರ ನಡೆಸಲು ನಿಯಂತ್ರಣ ರೇಖೆಯನ್ನು ದಾಟಿದ್ದು ವರದಿಯಾದ ಘಟನೆ ಇದಾಗಿದೆ. ಇದಲ್ಲದೆ ಜನವರಿ 3ರ ರಾತ್ರಿ ಬಿಎಸ್‌ಎಫ್ ಯೋಧರು ಪಾಕ್‌ನ 2 ಸೇನಾ ಶಿಬಿರಗಳನ್ನು ಪುಡಿಗಟ್ಟಿದ್ದರು. ಒಬ್ಬ ನುಸುಳುಕೋರ ಸೇರಿದಂತೆ 10ಕ್ಕೂ ಅಧಿಕ ಪಾಕ್ ಸೈನಿಕರು ಪ್ರಾಣ ಕಳೆದುಕೊಂಡಿದ್ದಾರೆ ಎನ್ನಲಾಗಿದೆ. ಕಳೆದ ಆರು ತಿಂಗಳಲ್ಲಿ ಪಾಕಿಸ್ತಾನದ ಹೊಂಚುದಾಳಿ ಹಾಗೂ ಗಡಿ ಆಕ್ರಮಣ ತಂಡಗಳ ದಾಳಿಗೆ ಬಲಿಯಾಗದೇ ಇರಲು ಎಲ್ಲ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಭಾರತೀಯ ಸೇನೆಗೆ ಸೂಚನೆ ನೀಡಲಾಗಿದೆ. ಅದರಂತೆ ಗಡಿಯಲ್ಲಿ ಕದನವಿರಾಮವನ್ನು ಪದೇ ಪದೇ ಉಲ್ಲಂಘಿಸಿ ಉಗ್ರರಿಗೆ ಒಳನುಸುಳಲು ಅನುವು



ಮಾಡಿಕೊಡುತ್ತಿರುವ ಪಾಕಿಸ್ತಾನಕ್ಕೆ ಭಾರತೀಯ ಸೇನೆ ತಕ್ಕ ಉತ್ತರ ನೀಡುತ್ತಿದೆ.

2016 ಮತ್ತು 2017 ಜಮ್ಮು–ಕಾಶ್ಮೀರದ ಇತ್ತೀಚಿನ ಇತಿಹಾಸದಲ್ಲಿ (2007ನ್ನು ಹೊರತುಪಡಿಸಿ) ಅತ್ಯಂತ ರಕ್ತಸಿಕ್ತ ಎಂದೇ ಹೇಳಲಾಗುತ್ತಿದ್ದು ಈ ಎರಡು ವರ್ಷಗಳಲ್ಲಿ ಸೇನೆ ಕ್ರಮವಾಗಿ 150 ಮತ್ತು 206 ಉಗ್ರರನ್ನು ಹೊಡೆದುರುಳಿಸಿದೆ, ಹಾಗೆಯೇ 82 ಮತ್ತು 75 ಯೋಧರು ವೀರಮರಣ ಹೊಂದಿದ್ದಾರೆ. 2004ಕ್ಕೆ ಹೋಲಿಸಿದರೆ 2017ರಲ್ಲಿ ಉಗ್ರ ಚಟುವಟಿಕೆಗಳು ಐದು ಪಟ್ಟು ಕಡಿಮೆಯಾಗಿದ್ದು 2004ರಲ್ಲಿ 2500ಕ್ಕೂ ಹೆಚ್ಚು ಭಯೋತ್ಪಾದಕ ಘಟನೆಗಳು ನಡೆದಿದ್ದರೆ 2017ರಲ್ಲಿ ಇದು 337ಕ್ಕೆ ಇಳಿದಿದೆ. 2013ರಲ್ಲಿ 170 ಭಯೋತ್ಪಾದಕ ಘಟನೆಗಳು ನಡೆದಿದ್ದು ಅತ್ಯಂತ ಕನಿಷ್ಠವಾಗಿತ್ತು.

# ಸಂವಿಧಾನ, ಸೇನೆಯ ನಂತರ ಭಾರತೀಯರ ರಕ್ಷಣೆಗೆ ನಿಲ್ಲುವುದು ಆರೆಸ್ಸೆಸ್ : ಸುಪ್ರೀಂ ಕೋರ್ಟ್ ಮಾಜಿ ನ್ಯಾಯಮೂರ್ತಿ



'ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ಸಶಸ್ತ್ರ ಸೈನ್ಯಬಲದ ನಂತರ ಭಾರತೀಯರು ಸುರಕ್ಷಿತವಾಗಿರಲು ಪ್ರಮುಖ ಕಾರಣ ಆರೆಸ್ಸೆಸ್' ಎಂದು ಸರ್ವೋಚ್ಚ ನ್ಯಾಯಾಲಯ ಮಾಜಿ ನ್ಯಾಯಾಧೀಶ ನ್ಯಾಯಮೂರ್ತಿ ಕೆ.ಟಿ. ಥಾಮಸ್ ಅಭಿಪ್ರಾಯಪಟ್ಟಿದ್ದಾರೆ. ಕೇರಳದ ಕೊಟ್ಟಾಯಮ್‌ನಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಕ್ಷಾವರ್ಗದ ಸಮಾರೋಪ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನ್ಯಾಯಮೂರ್ತಿ ಥಾಮಸ್, ದೇಶವನ್ನು ತುರ್ತುಪರಿಸ್ಥಿತಿಯಿಂದ ಬಿಡುಗಡೆಗೊಳಿಸಿದುದಕ್ಕಾಗಿ ಯಾವುದೇ ಸಂಘಟನೆಯನ್ನು ಗುರುತಿಸಬೇಕಿದ್ದರೆ ನಾನು ಆರೆಸ್ಸೆಸ್‌ನ್ನು ಹೆಸರಿಸುತ್ತೇನೆ ಎಂದರು.

ಸಂಘ ದೇಶದ ರಕ್ಷಣೆಗಾಗಿ ಸ್ವಯಂಸೇವಕರಲ್ಲಿ ಶಿಸ್ತಿನ ತರಬೇತಿ ನೀಡುತ್ತದೆ. ಇತರರ ಆಕ್ರಮಣದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸಲುವಾಗಿ ಶಾರೀರಿಕ ಶಿಕ್ಷಣ ನೀಡುತ್ತದೆ. ಮನುಷ್ಯರ ಶಕ್ತಿಯೂ ಇನ್ನೊಬ್ಬರ ಮೇಲೆ ಆಕ್ರಮಣ ಮಾಡುವ ಸಲುವಾಗಿ ಅಲ್ಲ. ಶಾರೀರಿಕ ಬಲಗಳಿಸುವ ಶಿಕ್ಷಣವನ್ನು ನೀಡುವ ಹಾಗೂ ತೋಳ್ಬಲವು ಆತ್ಮರಕ್ಷಣೆಗೆ ಎಂದು ನಂಬುವ ಸಲುವಾಗಿ ನಾನು ಆರೆಸ್ಸೆಸ್‌ನ್ನು ಅಭಿನಂದಿಸುತ್ತೇನೆ. ಅರೆಸ್ಸೆಸ್ ನೀಡುವ ಶಾರೀರಿಕ ಶಿಕ್ಷಣ ಹೊರಗಿನ ದಾಳಿಯ ಸಂದರ್ಭದಲ್ಲಿ ದೇಶ ಮತ್ತು ಸಮಾಜವನ್ನು ರಕ್ಷಿಸುವ ಸಲುವಾಗಿ ಇದೆ ಎಂದು ನನಗೆ ತಿಳಿದಿದೆ ಎಂದು ಅವರು ನುಡಿದರು.

1977ರಲ್ಲಿ ಕೊಟ್ಟಾಯಮ್‌ನ ಜಿಲ್ಲಾ ನ್ಯಾಯಾಧೀಶರಾಗಿ ಸೇವೆ ಆರಂಭಿಸಿದ ನ್ಯಾ. ಕೆ.ಟಿ. ಥಾಮಸ್ ಕೇರಳ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಹಾಗೂ 1996ರಿಂದ 2002ರವರೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದಾರೆ. 2006ರಲ್ಲಿ ಪದ್ಮಭೂಷಣ ಪ್ರಶಸ್ತಿ ಭಾಜನರಾದ ಅವರು "ಹನಿ ಬೀಸ್ ಆಫ್ ಸೊಲೋಮನ್" ಎನ್ನುವ ತಮ್ಮ ಆತ್ಮಕಥೆಯನ್ನು ಬರೆದಿದ್ದಾರೆ.

# ಹಿಂದೂ ಧರ್ಮಕ್ಕೆ ಮರಳಿದ ಜಾವಾದ್ವೀಪದ ರಾಜಕುಮಾರಿ

ಇಂಡೋನೇಶಿಯಾ ದೇಶದ ಜಾವಾ ದ್ವೀಪದ ರಾಜಕುಮಾರಿಯಾದ ಕಂಜೆನ್ ರಾಡೆನ್ ಆಯು ಮಹೀಂದ್ರಾಣಿ ಕೂಸ್ವಿದ್ಯಂತಿ ಪರಮಾಸಿ (ಚಿಕ್ಕದಾಗಿ ಕಂಜೆನ್ ಮಹೀಂದ್ರಾಣಿ) ವಿಧ್ಯುಕ್ತವಾಗಿ ಹಿಂದೂ ಧರ್ಮ ಸ್ವೀಕರಿಸಿದ್ದಾರೆ. ಇಂಡೊನೇಶಿಯಾದ ಬಾಲಿ ಪ್ರದೇಶದಲ್ಲಿ ಕೆಲವು ತಿಂಗಳ ಹಿಂದೆ ಅಲ್ಲಿನ ಪ್ರಮುಖ ಹಿಂದೂ ಪುರೋಹಿತರ ಮಾರ್ಗದರ್ಶನದಲ್ಲಿ ಸುಧಿ ವಾದನಿ ಎನ್ನುವ ಪೂಜಾವಿಧಿ ಕೈಗೊಂಡ ಕಂಜೆನ್ ಮಹೀಂದ್ರಾಣಿ "ಇದು ಅತ್ಯಂತ ಶುಭದಿನ, ನಾನು ಕೃತಜ್ಞಳಾಗಿದ್ದೇನೆ, ಧರ್ಮದ ಮಾರ್ಗಕ್ಕೆ ಮರಳಬೇಕು ಎಂದು ನಾನು ಬಹಳ ಕಾಲದಿಂದ ಹೃತ್ಪೂರ್ವಕವಾಗಿ ಬಯಸುತ್ತಿದ್ದೆ" ಎಂದಿದ್ದಾರೆ. ಆಕೆಯ ಸಹೋದರ ಮತ್ತು ಕುಟುಂಬದ ಜನರು ಹಿಂದೂ ಧರ್ಮವನ್ನು ಸ್ವೀಕರಿಸುವ ಅವಳ ನಿರ್ಧಾರವನ್ನು ಸಂಪೂರ್ಣವಾಗಿ ಬೆಂಬಲಿಸಿದರು.



ಸುಧಿ ವಾದನಿ ಎನ್ನುವುದು ಇಂಡೋನೇಶಿಯಾದ ಪ್ರಮುಖ ಅಲ್ಪಸಂಖ್ಯಾತ ಸಂಪ್ರದಾಯವಾದ ಹಿಂದೂ ಧರ್ಮವನ್ನು ಸ್ವೀಕರಿಸಬಯಸುವವರು ಕೈಗೊಳ್ಳುವ ಒಂದು ರೀತಿಯ ಶುದ್ಧಿ ವಿಧಿವಿಧಾನವಾಗಿದೆ. ನಾರಾಯಣ ಮಂತ್ರದ ಕೆಲವು ಸಾಲುಗಳ ಉದ್ಧರಣೆ, ಗಾಯತ್ರಿ ಮಂತ್ರ ಪಠಣ ಮೊದಲಾದವುಗಳು ಈ ಪೂಜಾವಿಧಾನದ ಭಾಗವಾಗಿವೆ.

ಇತ್ತೀಚೆಗಷ್ಟೇ ವಿಧ್ಯುಕ್ತವಾಗಿ ಹಿಂದೂ ಧರ್ಮವನ್ನು ಸ್ವೀಕರಿಸಿದ್ದರೂ ಬಹಳ ಕಾಲದಿಂದ ತಾನು ದೇವಾಲಯಗಳಿಗೆ ತೆರಳಿ ಪ್ರಾರ್ಥನೆ ಮಾಡುತ್ತಿದ್ದೆ, ಹಬ್ಬ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಿದ್ದೆ, ದೇವಸ್ಥಾನಗಳಲ್ಲಿ ಪ್ರಾರ್ಥನೆ ಸಲ್ಲಿಸುವಾಗ ನನಗೆ ಶಾಂತಿಯ ಅನುಭವವಾಗುತ್ತದೆ ಎನ್ನುವ ರಾಜಕುಮಾರಿ ಮಹೀಂದ್ರಾಣಿ, ಬಾಲಿ ದ್ವೀಪದಲ್ಲಿ ಪುರಾತನ ಇಂಡೋನೇಶಿಯಾದ ಪುರಾತನ ಸಂಸ್ಕೃತಿ, ಜಾವಾ ಹಾಗೂ ಬಾಲಿ ದ್ವೀಪಗಳ ಸಂಪ್ರದಾಯಗಳನ್ನು ಬೆಸೆಯುವ ಆಶ್ರಮವೊಂದನ್ನು ನಿರ್ಮಿಸುವುದಾಗಿ ಹೇಳಿದ್ದಾಳೆ.

ಇತ್ತೀಚಿನ ದಿನಗಳಲ್ಲಿ ಇಂಡೋನೇಶಿಯಾ ದ್ವೀಪಸಮುದಾಯದಲ್ಲಿ ಅನೇಕರು ಹಿಂದೂ ಧರ್ಮದ ತತ್ವಗಳಿಗೆ ಆಕರ್ಷಿತರಾಗಿ ಹಿಂದೂ ಧರ್ಮವನ್ನು ಸ್ವೀಕರಿಸುತ್ತಿರುವುದು ಕಂಡುಬರುತ್ತಿದೆ. ಪ್ರಾಚೀನ ಕಾಲದಿಂದಲೂ ಇಂಡೋನೇಶಿಯಾದ ಮೇಲೆ ಭಾರತೀಯ ಸಂಸ್ಕೃತಿಯು ಆಳವಾದ ಪ್ರಭಾವ ಬೀರಿರುವುದನ್ನು ನಾವು ಗಮನಿಸಬಹುದು.

# ಮಿಶನರಿಗಳಿಗೆ ಮೂಗುದಾರ ಹಾಕಲು ಮುಂದಾದ ಟಿಟಿಡಿ

ವಿಶ್ವಪ್ರಸಿದ್ಧ ತಿರುಪತಿ ವೆಂಕಟರಮಣ ದೇವಸ್ಥಾನದ ನಿರ್ವಹಣೆ ನಡೆಸುತ್ತಿರುವ ತಿರುಮಲ ತಿರುಪತಿ ದೇವಸ್ಥಾನಮ್ (ಟಿಟಿಡಿ) ಸಪ್ತಗಿರಿಗಳ ನಗರದಲ್ಲಿ ನಡೆಯುತ್ತಿರುವ ಮಿಶನರಿ ಚಟುವಟಿಕೆಗಳಿಗೆ ಮೂಗುದಾರ ಹಾಕಲು ಮುಂದಾಗಿದ್ದು ಹಿಂದುಯೇತರ ಮತಗಳನ್ನು ಅನುಸರಿಸುತ್ತಿರುವ ನಲವತ್ತಕ್ಕೂ ಹೆಚ್ಚು ಸಿಬ್ಬಂದಿಗಳಿಗೆ ನೋಟೀಸ್ ನೀಡಲು ತಯಾರಿ ನಡೆಸಿದೆ. ತಿರುಮಲದಲ್ಲಿ ಹೆಚ್ಚುತ್ತಿರುವ ಕ್ರೈಸ್ತ ಮಿಶನರಿಗಳ ಮತಾಂತರ ಚಟುವಟಿಕೆಯನ್ನು ನಡೆಸುವವರು ಮತ್ತು ಇತರ ಧರ್ಮಗಳನ್ನು ಅನುಸರಿಸುವ ವಿಷಯದಲ್ಲಿ ಕಠಿಣವಾಗಿರುವಂತೆ ಅನೇಕ ಮಠಗಳ ಮಠಾಧೀಶರು ಮತ್ತು ಭಕ್ತರು ಆಗ್ರಹ ನಡೆಸಿದ ಹಿನ್ನೆಲೆಯಲ್ಲಿ ಟಿಟಿಡಿ ಈ ಕ್ರಮಕ್ಕೆ ಮುಂದಾಗಿದೆ. ಟಿಟಿಡಿಯ ನಿಯಮಗಳ ಪ್ರಕಾರ ಅಲ್ಲಿನ ಸಿಬ್ಬಂದಿ ಹಿಂದುವಲ್ಲದ ಇತರೆ ಮತಗಳನ್ನು ಅನುಸರಿಸುವುದು ನಿಷಿದ್ಧವಾಗಿದೆ. ಇತರೆ ಮತಗಳ ಜನರಿಗೆ ದೇವಸ್ಥಾನದಲ್ಲಿ ಪ್ರವೇಶ ಇರುವುದಾದರೂ ಪ್ರವೇಶ ಬಯಸುವವರು ಪ್ರವೇಶಕ್ಕೆ ಮೊದಲು ತಮಗೆ ತಿರುಮಲದ ದೇವರು ವೆಂಕಟೇಶ್ವರನಲ್ಲಿ ನಂಬಿಕೆ ಇದೆ ಎಂದು ಹೇಳಿಕೆ ನೀಡಬೇಕು ಎನ್ನುವ ನಿಯಮವಿದೆ.

ಟಿಟಿಡಿಯ ಡೆಪ್ಯುಟಿ ಎಕ್ಸಿಕ್ಯೂಟಿವ್ ಆಫಿಸರ್ ಆಗಿರುವ ಮಹಿಳಾ ಅಧಿಕಾರಿಯೋರ್ವರು ಪ್ರತಿ ಭಾನುವಾರ ಟಿಟಿಡಿಗೆ ಸೇರಿದ ಕಛೇರಿ ವಾಹನದಲ್ಲಿ ಚರ್ಚ್‌ಗೆ ತೆರಳಿ ಪ್ರಾರ್ಥನೆ ನಡೆಸುತ್ತಿರುವ ಆರೋಪದ ಹಿನ್ನೆಲೆಯಲ್ಲಿ ಸಂತರು ಮತ್ತು ಆಗಮ ಪಂಡಿತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಕೆಲವು ವರ್ಷಗಳ ಹಿಂದೆ ತಿರುಮಲ ಪ್ರದೇಶದಲ್ಲಿ ಕ್ರೈಸ್ತ ಮಿಶನರಿ ಚಟುವಟಿಕೆಗಳು ನಡೆಯುತ್ತಿರುವುದು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಅಂದಿನ ಅಖಂಡ ಆಂಧ್ರ ಪ್ರದೇಶ ಸರ್ಕಾರ ಪೂಜಾಸ್ಥಾನಗಳಲ್ಲಿ ಉಳಿದ ಮತಗಳ ಪ್ರಚಾರವನ್ನು ನಿಷೇಧಿಸಿ ಸುಗ್ರೀವಾಜ್ಞೆ ಹೊರಡಿಸಿತ್ತು. ತಿರುಮಲವೂ ಸೇರಿದಂತೆ ಆಂಧ್ರ ಪ್ರದೇಶದ ಒಟ್ಟು ಇಪ್ಪತ್ತು ದೇವಸ್ಥಾಗಳಲ್ಲಿ ಹಿಂದುಯೇತರ ಮತಗಳನ್ನು ಅನುಸರಿಸುವುದನ್ನು ನಿಷೇಧಿಸಿ ಆದೇಶ ಹೊರಡಿಸಿತ್ತು. ಇವುಗಳಲ್ಲಿ 10 ದೇವಸ್ಥಾನಗಳು ಟಿಟಿಡಿಯ ಅಧೀನದಲ್ಲಿದ್ದವು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.